ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೪, ಸಂಚಿಕೆ ೧೨, ಮೇ ೨೦೧೭

ಕನ್ನಡಿಗರೇ, ಉಜ್ವಲವಾದ ನಿಮ್ಮ ಭಾಷೆಯು ಒಂದಾನೊಂದು ಕಾಲಕ್ಕೆ ಉತ್ತರದಲ್ಲಿ ಬಹುದೂರದವರೆಗೆ ಮನೆಮಾಡಿಕೊಂಡಿತ್ತೆಂಬ ಸಂಗತಿಯು ನಿಮ್ಮ ಹೃದಯವನ್ನು ಸ್ಫೂರ್ತಿಗೊಳಿಸಲಿ. ನಮ್ಮ ಸುತ್ತಲೂ ಎಲ್ಲೆಲ್ಲಿಯೂ ಇತಿಹಾಸದ ರಾಶಿಯೇ ಒಟ್ಟಿದ್ದೂ, ನಮಗೆ ಇತಿಹಾಸವೇ ಇಲ್ಲವೆಂದು ನಾವು ಸುಮ್ಮನೆ ಅರಚಿಕೊಳ್ಳುತ್ತಿದ್ದೇವೆ!

-- ಕರ್ನಾಟಕ ಗತವೈಭವ, ೧೯೨೦, (ಆಲೂರು ವೆಂಕಟರಾಯರು)

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಅನುಷ್ಟುಭ್ ಎಂಬ ಛಂದಸ್ಸು ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೪

ರಾಂ ರಾಮ ... ಪು. ೫

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೬

ಕಾವ್ಯ ಚಿಲುಮೆ ... ಪು. ೮

ಚಿಲುಮೆಯ ಒಳಗೆ

ಪದಪುಂಜ ... ಪು. ೯

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೫

ಎಂ. ಕೆ. ಇಂದಿರಾ ಅವರನ್ನು ಭೇಟಿ ಮಾಡಿದ ಮೆಲುಕು – ೧೨

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ದಿನನಿತ್ಯದ ಜೀವನದಲ್ಲಿ ಮನುಷ್ಯನಿಗೆ ಹೆಚ್ಚು ತೃಪ್ತಿಯನ್ನು ತಂದುಕೊಡುವುದು ಸಮಾಜದಲ್ಲಿನ ಇನ್ನಿತರರೊಂದಿಗೆ ಬೆರೆತಾಗ. ಕೆಲವರಿಗೆ ಏಕಾಂತ ಇಷ್ಟವಾಗಬಹುದು. ಹೆಚ್ಚೆಂದರೆ ಕೆಲವು ಘಂಟೆಗಳು ಅಥವಾ ಕೆಲವು ದಿನಗಳು ಕಳೆಯಬಹುದು. ಆದರೆ, ನಿರಂತರವಾಗಿ ಯಾರ ಜೊತೆಯೂ ಮಾತನಾಡದೆ ಸುಮ್ಮನೇ ಇರಲು ಬಹುಷಃ ಯಾರೂ ಇಷ್ಟಪಡುವುದಿಲ್ಲ.

ಹಿಂದಿನ ಕಾಲದಲ್ಲಿ, ನಮ್ಮ ಹಿರಿಯರು ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುತ್ತಿದ್ದದ್ದು ಹೆಚ್ಚಾಗಿ ಮುಖಾಮುಖಿಯಾಗಿ. ದಿನನಿತ್ಯದ ಓಡಾಟದ ಸಮಯದಲ್ಲಿ, ಸಂತೆಯಲ್ಲಿ, ದೇಗುಲಗಳಲ್ಲಿ ಅಥವಾ ಸಂಜೆಯ ಹರಟೆಕಟ್ಟೆಯಲ್ಲಿ ಹಾವಭಾವಗಳೊಡನೆ ಸ್ನೇಹಬಳಗದವರೊಡನೆ ಬೆರೆಯುತ್ತಿದ್ದರು. ಅಲ್ಲಿ ಕೇವಲ ಮಾಹಿತಿಯು ಏಕಮುಖವಾಗಿರದೆ, ಸಂವಾದಕ್ಕೆ ಅವಕಾಶವಿರುತ್ತಿತ್ತು. ಕೇವಲ ಒಬ್ಬರು ಹೇಳಿ, ಮಿಕ್ಕವರೆಲ್ಲರೂ ಕೇಳಿಸಿಕೊಳ್ಳಬೇಕು ಅನ್ನೋ ರೀತಿಯ ಹರಿಕಥಾ ಪ್ರಸಂಗಗಳು ನಡೆಯುತ್ತಿದ್ದದ್ದು ಬಹಳ ವಿರಳ. ಇಂದಿನ ದಿನಗಳಲ್ಲಿ ವಿದ್ಯುನ್ಮಾನ ತಂತ್ರಜ್ಞಾವು ಮಾಹಿತಿಯನ್ನು ಎಲ್ಲರಿಗೂ ಸರಾಗವಾಗಿ ಸಿಗುವಂತೆ ಮಾಡಿದೆ. ದೇಶವಿದೇಶಗಳನ್ನು ಸುತ್ತದೇ, ಅನುದಿನವೂ ಚಿತ್ರಗಳು, ವೀಡಿಯೊಗಳು ವ್ಹಾಟ್ಸ್ಯಾಪ್ ಇತ್ಯಾದಿಗಳ ಮೂಲಕ ಹರಿದುಬರುತ್ತಿರುತ್ತವೆ. ದಿನಗಟ್ಟಲೆ ಪುಸ್ತಕಗಳಲ್ಲಿ ಹುಡಿಕಿ, ಓದಿ ತಿಳಿದುಕೊಳ್ಳಬೇಕಾದ ಅದೆಷ್ಟು ವಿಚಾರಗಳು ಕ್ಷಣಾರ್ಧದಲ್ಲಿ ನಮ್ಮ ಮೊಬೈಲ್ ಗಳಿಗೆ ಹರಿದು ಬಂದು ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡಿಲ್ಲ! ಇದೂ ನಿಜಕ್ಕೂ ಬಹಳ ಸಂತಸದ ವಿಷಯ. ಇಂತಹ ಜ್ಞಾನವಾಹಿನಿಯು ನಮ್ಮ ತಿಳಿವಳಿಕೆಯ ದಾಹವನ್ನು ಖಂಡಿತ ತೀರಿಸಲಿ. ಅಂತೆಯೇ ಒಂದಷ್ಟು ಜಾಗರೂಕತೆಯೂ ಆವಶ್ಯಕ.

ಹರಿದು ಬರುವ ಮಾಹಿತಿಯನ್ನು ಕಂಡ ತಕ್ಷಣ, " ಓಹ್, ಈ ಮಾಹಿತಿಯನ್ನು ಇನ್ನೊಂದು ವ್ಹಾಟ್ಸ್ಯಾಪ್ ಗುಂಪಲ್ಲಿ ಯಾರೂ ಹಾಕಿಲ್ಲ, ನಾನೇ ಮೊದಲು ಹಾಕುವೆ" ಎನ್ನುವ ತರಾತುರಿ ಬಹಳ ಒಳ್ಳೆಯದೇನಲ್ಲ. ಬಹಳಷ್ಟು ಸಲ ಅಂತಹ ಮಾಹಿತಿಯನ್ನು ವೈಭವೀಕರಿಸಲಾಗಿರುತ್ತದೆ ಇಲ್ಲವೇ ಅದು ತಪ್ಪು ಮಾಹಿತಿಯಾಗಿರುತ್ತದೆ. ಕಿಡಿಗೇಡಿಗಳು ನಿಜಜೀವನದಲ್ಲಿ ತೊಂದರೆ ಕೊಡುವಂತೆ, ತಪ್ಪುತಪ್ಪು ಮಾಹಿತಿಯನ್ನು ಹರಿಯಬಿಟ್ಟು ಸಮಾಜದಲ್ಲಿ ಗೊಂದಲ ಉಂಟಾಗುವಂತೆ ಮಾಡಬಹುದು. ಉದಾ: "ಈ ಆಹಾರ ಸರಿ ಇಲ್ಲ. ಇದನ್ನು ತಿನ್ನಿ, ನಿಮ್ಮ ಬೊಜ್ಜು ಇಳಿಯುತ್ತದೆ" ಎಂದೋ, ಅಥವಾ ಒಂದು ಚಿತ್ರ ಕಳಿಸಿ, "ಇದು ಹನುಮಂತನ ಗದೆ, ಹತ್ತು ಜನಕ್ಕೆ ಕಳಿಸಲೇ ಬೇಕು" ಎನ್ನುವ ಇಕ್ಕಟ್ಟಿಗೆ ಸಿಲುಕಿಸುವ ಮಾಹಿತಿಗಳು.

ಯಾವುದನ್ನೇ ಆಗಲಿ, ಜೀವನದಲ್ಲಿ ಪರಾಂಬರಿಸಿ ನೋಡುವುದು ಅತ್ಯುತ್ತಮ ಎನ್ನುವ ಹಿರಿನುಡಿಯಂತೆ, ನಾವು ಮತ್ತೊಬ್ಬರಿಗೆ ಮಾಹಿತಿಯನ್ನು ಕೊಡುವ ಮೊದಲು, ಒಂದಷ್ಟು ಪ್ರಶ್ನೆಗಳನ್ನು ನಾವು ಕೇಳಿಕೊಂಡರೆ ಉತ್ತಮ. ಬಂದಿರುವ ಮಾಹಿತಿಯು ನನಗೆ ಏನೆಂದು ಗೊತ್ತಾಯಿತೆ? ಈ ಮಾಹಿತಿಯಿಂದ ಕಳಿಸುತ್ತಿರುವವರಿಗೆ ಅನುಕೂಲವಿದೆಯೇ? ಕಳಿಸುವುದರಿಂದ ಏನಾದರೂ ಅನಾನುಕೂಲವಾಗುವುದೇ? ಈ ಮಾಹಿತಿಯು ಎಷ್ಟು ಸತ್ಯ ? ... ಹೀಗೆ ನಮ್ಮನ್ನು ನಾವೇ ಪ್ರಶ್ನಿಸಿಕೊಂಡರೆ ಅನಾವಶ್ಯಕವಾದ/ತಪ್ಪಾದ ಮಾಹಿತಿಯನ್ನು ಮುಂದಕ್ಕೆ ಹರಿಯಬಿಡದಿರುವ ಒಂದು ಒಳ್ಳೆಯ ಕೆಲಸವನ್ನು ಮಾಡುತ್ತೇವೆ. ಹೀಗೆ ನಾವು ತಡೆಹಿಡಿಯುವ ಕೆಲಸ ಮಾಡದಿದ್ದರೆ "ನೂರು ಸರ್ತಿ ಸುಳ್ಳು ಹೇಳಿದರೆ, ಅಥವಾ ನೂರು ಜನ ಸುಳ್ಳನ್ನೇ ನಿಜವೆಂದು ನಂಬಿದರೆ, ಅದು ನಿಜವೇ ಆಗಿಬಿಡುತ್ತದೆ" ಅನ್ನುತ್ತಾರಲ್ಲ, ಹಾಗಾಗುತ್ತದೆ. ಇದಕ್ಕೊಂದು ವರ್ತಮಾನದ ಉದಾಹರಣೆಯೆಂದರೆ "ಹಿಂದಿಯು ನಮ್ಮ ರಾಷ್ಟ್ರಭಾಷೆ" ಎನ್ನುವ ತಿಳಿವಳಿಕೆ. ನಿಜವೇನೆಂದರೆ, ಹಿಂದಿಯೂ ಕನ್ನಡದಂತೆ ಸಂವಿಧಾನವು ಒಪ್ಪಿರುವ ಭಾಷೆಯಷ್ಟೇ.

ಓದುಗರಲ್ಲಿ ಸವಿನಯ ವಿನಂತಿ. ಮಾಹಿತಿಯು ತಪ್ಪೆಂದು ಕಂಡರೆ, ಕಳಿಸಿದವರಿಗೆ ತಿಳಿಹೇಳಿ. ಮಾಹಿತಿಯು ಸತ್ವಪೂರ್ಣವಾಗಿದ್ದರೆ ಖಂಡಿತ ಇತರರಿಗೂ ಹಂಚಿ. ಸಂದೇಹವಿದ್ದರೆ ಕಳಿಸಿದವರಿಗೆ ಕೇಳಿ ತಿಳಿದುಕೊಳ್ಳಿ. ಒಳ್ಳೊಳ್ಳೆಯ ಮಾಹಿತಿಗಳು ನಮ್ಮೆಲ್ಲರನ್ನೂ ಪ್ರಚೋದಿಸಲಿ.▪

ಎರಡು ತಿಂಗಳ ಪ್ರಮುಖ ದಿನಗಳು

ಮೇ ಶ್ರೀ ಹೇವಿಳಂಬಿ ನಾಮ ಸಂವತ್ಸರ, ಉತ್ತರಾಯಣ,
ವಸಂತ ಋತು, ವೈಶಾಖ/ಜ್ಯೇಷ್ಠ ಮಾಸ

01 ಸೋ - ರಾಮಾನುಜಾಚಾರ್ಯ ಜಯಂತಿ
06 ಶ - ಏಕಾದಶಿ, 09 ಮಂ - ನೃಸಿಂಹ ಜಯಂತಿ
10 ಬು -ಪುದ್ಧ ಪೌರ್ಣಿಮೆ, 12 ಶು - ಷಬ್-ಎ-ಬರಾತ್/ನಾರದ ಜಯಂತಿ
14 ಭಾ - ಸಂಕಷ್ಟ ಚತುರ್ಥಿ, 22 ಸೋ - ಏಕಾದಶಿ
25 ಗು - ಅಮಾವಾಸ್ಯೆ, 26 ಶು - ಜ್ಯೇಷ್ಠ ಮಾಸ ಆರಂಭ
31 ಬು - ವಿಶ್ವ ತಂಬಾಕು ನಿಷೇಧ ದಿನ

ಜೂನ್ ಶ್ರೀ ಹೇವಿಳಂಬಿ ನಾಮ ಸಂವತ್ಸರ,
ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ/ಆಶಾಢ ಮಾಸ

05 ಸೋ - ನಿರ್ಮಲಾ ಏಕಾದಶಿ, 08/09 - ಹುಣ್ಣಿಮೆ
13 ಮಂ - ಸಂಕಷ್ಟ ಚತುರ್ಥಿ, 20 ಮಂ - ಏಕಾದಶಿ
23 ಶು - ಷಬ್-ಎ-ಬರಾತ್
24 ಶ - ಮಣ್ಣೆತ್ತಿನ ಅಮಾವಾಸ್ಯೆ
26 ಸೋ - ಕುತುಬ್ ಏ ರಂಜಾನ್

ಭಗವದ್ಗೀತೆಯ ಮೊದಲನೆಯ ಶ್ಲೋಕದಲ್ಲಿ ಧೃತರಾಷ್ಟ್ರನು ಸಂಜಯನನ್ನು ಹೀಗೆ ಕೇಳುತ್ತಾನೆ:

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ |
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ||

(ಸಂಜಯ, ಈ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧ ಮಾಡಲು ಉತ್ಸುಕರಾಗಿ ಸೇರಿರುವ ನಮ್ಮವರೂ ಪಾಂಡವರೂ ಏನು ಮಾಡಿದರು?)

ಕಾಳಿದಾಸನ "ರಘುವಂಶ"ದ ಮೊದಲನೆಯ ಶ್ಲೋಕದಲ್ಲಿ ಈ ಪ್ರಾರ್ಥನೆಯಿದೆ:

ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ |
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ||

(ವಾಕ್ ಮತ್ತು ಅರ್ಥಗಳ ಸಂಪಾದನೆಗಾಗಿ ನಾನು ವಾಕ್ ಮತ್ತು ಅರ್ಥಗಳಂತೆ ಹೊಂದಿಕೊಂಡಿರುವ ಜಗನ್ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರನ್ನು ವಂದಿಸುವೆ)

ಒಂದೇ ಛಂದಸ್ಸಿನಲ್ಲಿ ರಚಿತವಾಗಿರುವ ಈ ಎರಡೂ ಶ್ಲೋಕಗಳ ವೈಶಿಷ್ಟ್ಯವೇನೆಂದರೆ:

ಪ್ರತಿಯೊಂದು ಶ್ಲೋಕದಲ್ಲೂ ನಾಲ್ಕು ಪಾದಗಳಿವೆ (ಪ್ರತಿಸಾಲಿನಲ್ಲಿಯೂ ಎರಡು ಪಾದ); ಪ್ರತಿಯೊಂದು ಪಾದದಲ್ಲಿಯೂ ಎಂಟು ಅಕ್ಷರಗಳಿವೆ; ಎಂದರೆ ಪ್ರತಿ ಶ್ಲೋಕದಲ್ಲಿಯೂ ಒಟ್ಟು ಮೂವತ್ತೆರಡು ಅಕ್ಷರಗಳಿವೆ.
ಈ ಛಂದಸ್ಸಿಗೆ ಅನುಷ್ಟುಭ್ ಎಂದು ಹೆಸರು. ಸಂಸ್ಕೃತ ಕಾವ್ಯ ರಚನೆಯಲ್ಲಿ ಹಲವಾರು ಛಂದಸ್ಸುಗಳನ್ನು ಉಪಯೋಗಿಸಬಹುದಾದರೂ, ಸುಲಭವೂ ಸರಳವೂ ಆಗಿರುವ ಈ ಛಂದಸ್ಸೇ ಹೆಚ್ಚು ಬಳಕೆಯಲ್ಲಿದೆ. ರಾಮಾಯಣ, ಮಹಾಭಾರತ ಮುಂತಾದ ಮಹಾ ಕಾವ್ಯಗಳಲ್ಲೂ. ಅಷ್ಟಾದಶ ಪುರಾಣಗಳಲ್ಲೂ, ಆರ್ಯಭಟ, ಭಾಸ್ಕರ ಮುಂತಾದವರ ಗಣಿತ, ಖಗೋಳ ಶಾಸ್ತ್ರಗಳಲ್ಲೂ , ಚರಕ ಮತ್ತು ಸುಶ್ರುತರ ವೈದ್ಯ ಸಂಹಿತೆಗಳಲ್ಲೂ ಬಹುವಾಗಿ ಉಪಯೋಗಿಸಿರುವುದು ಇದೇ ಛಂದಸ್ಸನ್ನೇ. ಶ್ರೀ ಕೃಷ್ಣ ಪರಮಾತ್ಮನು ತಾನು ಎಲ್ಲ ಜೀವಿಗಳಲ್ಲಿಯೂ, ವಸ್ತುಗಳಲ್ಲೂ, ವಿಷಯಗಳಲ್ಲೂ ಶ್ರೇಷ್ಠನು ಎಂದು ಹೇಳಿಕೊಳ್ಳುವಾಗ, ಛಂದಸ್ಸುಗಳಲ್ಲಿ ತಾನು **ಗಾಯತ್ರೀ ಛಂದಸ್** ಎಂದು ತಿಳಿಸುತ್ತಾನೆ (ಭಗವದ್ಗೀತೆ, ವಿಭೂತಿಯೋಗ, 34).
ಗಾಯತ್ರೀ ಛಂದಸ್ಸಿನಲ್ಲಿ ಮೂರು ಪಾದಗಳು, ಎಂದರೆ ಇಪ್ಪತ್ನಾಲ್ಕು ಅಕ್ಷರಗಳು ಮಾತ್ರ ಇವೆ.
ಅನುಷ್ಟುಭ್ ಎಂಬ ಪದದ ಮೂಲ: "ಅನು ನಿರಂತರಂ ಸ್ತುಭ್ಯತೇ ಅನಯಾ ಅನುಷ್ಟುಪ ವಾಕ್" ಎಂದರೆ ಅನಂತರ ಸ್ತುತಿಸುವುದು. ಒಂದು ಕಾಲದಲ್ಲಿ ಇದು ಸ್ತೋತ್ರಗಳಿಗೆ ಮಾತ್ರ ಮೀಸಲಾಗಿದ್ದಿರಬಹುದು. ಈಗ ಶ್ಲೋಕವೆಂದರೆ ಅನುಷ್ಟುಭ್ ಎಂದೇ ಪರಿಗಣಿಸಬೇಕು.
ವಿದ್ಯಾಧಿದೇವತೆಯಾದ ಸರಸ್ವತಿಗೂ ಅನುಷ್ಟುಭಾ ಎಂಬ ಹೆಸರಿದೆ.

ಎಂಟು ಅಕ್ಷರಗಳ ಪ್ರತಿಯೊಂದು ಪಾದವನ್ನು ರಚಿಸುವಾಗಲೂ ಒಂದು ಸುಲಭವಾದ ನಿಯಮವನ್ನು ಪಾಲಿಸಬೇಕು. ಅದೇನೆಂದರೆ:

ಪಂಚಮಂ ಲಘು ಸರ್ವತ್ರ ಸಪ್ತಮಂ ದ್ವಿಚತುರ್ಥಯೋಃ|
ಷಷ್ಠಂ ಗುರು ವಿಜಾನೀಯಾತ್ ಏತತ್ ಶ್ಲೋಕಸ್ಯ ಲಕ್ಷಣಂ||

[ನಾಲ್ಕೂ ಪಾದಗಳಲ್ಲಿ ಐದನೆಯ ಅಕ್ಷರವು ಲಘು (ಹ್ರಸ್ವ) ವಾಗಿರಬೇಕು, ಆರನೆಯ ಅಕ್ಷರವು ಗುರು (ದೀರ್ಘ) ವಾಗಿರಬೇಕು..ಏಳನೆಯ ಅಕ್ಷರವು ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಲಘುವಾಗಿರಬೇಕು. (ಎಂದರೆ ಏಳನೆಯ ಅಕ್ಷರವು ಒಂದನೆಯ ಮತ್ತು ಮೂರನೆಯ ಪಾದಗಳಲ್ಲಿ ದೀರ್ಘವಾಗಿರಬೇಕು). ಇದು ಶ್ಲೋಕದ ಲಕ್ಷಣ].

ನಿಯಮಗಳೇನೋ ಸುಲಭವಾಗಿವೆ. ಆದರೆ ಅಕಸ್ಮಾತ್ ನಾವು ಒಂದು ಪಾದದಲ್ಲಿ ಉಪಯೋಗಿಸಬೇಕೆಂದಿರುವ ಪದಗಳಲ್ಲಿರುವ ಅಕ್ಷರಗಳ ಸಂಖ್ಯೆ ಎಂಟಕ್ಕಿಂತ ಕಡಿಮೆ ಆದರೆ ಏನು ಮಾಡುವುದು? ಅದಕ್ಕೊಂದು ಸೂತ್ರವಿದೆ:

ಚ ವೈ ತು ಹಿ ಪಾದಪೂರ್ಣಾರ್ಥಂ

ಎಂದರೆ "ಚ" (ಮತ್ತು), "ವೈ" (ಖಂಡಿತವಾಗಿ), ತು (ಆದರೆ), ಹಿ (ಕಾರಣಸೂಚಕ - ಏಕೆಂದರೆ) ಈ ಏಕಾಕ್ಷರ ಅನ್ವಯಗಳನ್ನು ಪಾದವನ್ನು ಪೂರಯಿಸುವುದಕ್ಕೋಸ್ಕರ ಉಪಯೋಗಿಸಬಹುದು.
ಇವುಗಳನ್ನು ಸಂದರ್ಭೋಚಿತವಾಗಿ ಉಪಯೋಗಿಸಬೇಕೇ ವಿನಾ ಮನಸ್ಸಿಗೆ ಬಂದಂತೆ ಅಲ್ಲ, ಇದರ ಬಗ್ಗೆ ಒಂದು ಕಥೆಯಿದೆ.

ಮುಂದಿನ ಪುಟ ನೋಡಿ ...

ಭೋಜರಾಜನು **ಒಳ್ಳೆಯ** ಕವಿತೆ ರಚಿಸಿದವರಿಗೆ ಅಕ್ಷರಕ್ಕೊಂದು ಲಕ್ಷ ವರಹ ಕೊಡುವೆನೆಂದು ಘೋಷಿಸಿದ್ದನಂತೆ. ಇದನ್ನರಿತು ರಾಜನ ಮುಂದೆ ತಮ್ಮ ಅದೃಷ್ಟವನ್ನು ಪರೀಕ್ಷಿಸಲು ಹೋದವರೆಷ್ಟೋ? ಅಂಥವರಲ್ಲಿ ಒಬ್ಬ ಬೃಹಸ್ಪತಿಯು ಪದ್ಯ ರಚಿಸಲು ಪ್ರಾರಂಭಿಸಿದ. ಅದರ ವಿಷಯ ಇಷ್ಟು: "ರಾಜೇಂದ್ರ ಏಳುವಂಥವನಾಗು. ಮುಖವನ್ನು ತೊಳೆದುಕೋ! ಈ ಕೋಳಿ ಕೂಗುತ್ತಿದೆ" ಇದನ್ನು ಸಂಸ್ಕೃತದಲ್ಲಿ ಹೇಳಿದರೆ:

ಒಂದನೆಯ ಪಾದ: ಉತ್ತಿಷ್ಠೋತ್ತಿಷ್ಠ ರಾಜೇಂದ್ರ

ಎರಡನೆಯ ಪಾದ: ಮುಖಂ ಪ್ರಕ್ಷಾಲಯಸ್ವ

ಮೂರನೆಯ ಪಾದ: ಏಷ ಆಹೂಯತೇ ಕುಕ್ಕುಟಃ

ಮೊದಲನೆಯ ಪಾದದಲ್ಲೇನೋ ಎಂಟು ಅಕ್ಷರಗಳಿವೆ; ಆದರೆ ಎರಡನೆಯ ಪಾದದಲ್ಲಿ ಏಳು ಮತ್ತು ಮೂರನೆಯ ಪಾದದಲ್ಲಿ ಒಂಬತ್ತು ಅಕ್ಷರಗಳಿವೆಯಲ್ಲವೇ? ಸರಿ, ಮೂರನೆಯ ಪಾದದ ಕೊನೆಯಕ್ಷರವನ್ನು ಎರಡನೆಯ ಪಾದದ ಕೊನೆಗೆ ಸೇರಿಸಿದರಾಯಿತು (ಅರ್ಥ ಏನು ಬೇಕಾದರೂ ಆಗಲಿ). ಇನ್ನು ಕೊನೆಯ ಪಾದಕ್ಕೆ ಏನು ಮಾಡುವುದು? ಮೇಲ್ಕಂಡ ಸೂತ್ರದಲ್ಲಿ ಸೂಚಿಸಿದ ನಾಲ್ಕು ಅಕ್ಷರಗಳನ್ನೇ ಎರಡು ಬಾರಿ ಬರೆದರಾಯಿತು! ಅಂತೂ ಶ್ಲೋಕ ಸಿದ್ಧವಾಯಿತು:

ಉತ್ತಿಷ್ಠೋತ್ತಿಷ್ಠ ರಾಜೇಂದ್ರ ಮುಖಂ ಪ್ರಕ್ಷಾಲಯಸ್ವ ಟಃ |

ಏಷ ಆಹೂಯತೇ ಕುಕ್ಕು ಚವೈತುಹಿ ಚವೈತುಹಿ ||

ಈ ಪ್ರಚಂಡ ಕವಿಗೆ ರಾಜನು ಏನು "ಉಡುಗೊರೆ"ಯನ್ನು ಕೊಟ್ಟನೋ ತಿಳಿಯದು.

(ಈ ಶ್ಲೋಕವನ್ನು ತೋಲ ಎಂಬ ಕೇರಳ ದೇಶದ ಕವಿಯು ಅಪ್ರಬುದ್ಧ ಕವಿಗಳನ್ನು ಕುಚೋದ್ಯ ಮಾಡುವುದಕ್ಕೆ ಬರೆದನೆಂದೂ ಹೇಳುತ್ತಾರೆ).

ಭೋಜರಾಜನ ಕಾಲದ್ದೆಂದೇ ಹೇಳಲಾಗುವ ಇನ್ನೊಂದು ಶ್ಲೋಕವನ್ನು ಇಲ್ಲಿ ಉದ್ಧರಿಸಬಹುದು. ಒಬ್ಬ ಬ್ರಾಹ್ಮಣ, ತೀರ ಬಡವ. ಅವನೂ ರಾಜನನ್ನು ಕುರಿತು ಒಂದು ಶ್ಲೋಕವನ್ನು ಬರೆದರೆ ಸ್ವಲ್ಪ ಹಣವಾದರೂ ಸಿಕ್ಕೀತು ಎಂದು ಯೋಚಿಸಿದ. ಆದರೆ ಪಾಂಡಿತ್ಯತೆ ಕಡಿಮೆ. ಎರಡು ಹೊತ್ತಿಗೆ ಊಟವೂ ಇಲ್ಲದ್ದರಿಂದ ಅವನ ಮನಸ್ಸೆಲ್ಲವೂ ಆಹಾರದ ಮೇಲೆಯೇ. ಮೊದಲನೆಯ ಸಾಲನ್ನು ಹೀಗೆ ಬರೆದ:

ಭೋಜನಂ ದೇಹಿ ರಾಜೇಂದ್ರ ಘೃತ ಸೂಪ ಸಮನ್ವಿತಂ |

(ರಾಜೇಂದ್ರ, ತುಪ್ಪವೂ, ಸಾರೂ ಇರುವ ಭೋಜನವನ್ನು ದಯಪಾಲಿಸು)

ಎಷ್ಟು ಚಿಂತಿಸಿದರೂ ಅವನಿಗೆ ಎರಡನೆಯ ಸಾಲನ್ನು ಬರೆಯಲು ಸಾಧ್ಯವಾಗಲೇ ಇಲ್ಲ, ಕೊನೆಗೆ ಕಾಳಿದಾಸನ ಮೊರೆಹೊಕ್ಕ. ಕಾಳಿದಾಸನಿಗೆ ಬ್ರಾಹ್ಮಣನ ಶ್ಲೋಕದ ಮೊದಲನೆಯ ಸಾಲನ್ನು ನೋಡಿ ನಗು ಬಂದಿತು. ಅವನು ಎರಡನೆಯ ಸಾಲನ್ನು ಈ ರೀತಿ ಬರೆದುಕೊಟ್ಟ:

ಮಾಹಿಷಂ ಚ ಶರಚ್ಚಂದ್ರ ಚಂದ್ರಿಕಾ ಧವಲಂ ದಧಿ ||

(ಶರತ್ಕಾಲದ ಚಂದ್ರನ ಬೆಳದಿಂಗಳಂತೆ ಶೋಭಿಸುವ, ಎಮ್ಮೆಯ ಮೊಸರನ್ನೂ ಸಹ).

ರಾಜನು ಮೊದಲನೆಯ ಸಾಲಿಗೆ ಏನೂ ಕೊಡಲಿಲ್ಲ. ಎರಡನೆಯ ಸಾಲಿಗೆ ಬೇಕಾದಷ್ಟು ಕೊಟ್ಟನಂತೆ. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ



ಏನು ಭೈರವಲೀಲೆಯೀ ವಿಶ್ವಭ್ರಮಣೆ |
ಏನು ಭೂತಗ್ರಾಮನರ್ತನೋನ್ಮಾದ ||
ಏನಗ್ನಿ ಗೋಳಗಳು ! ಏನಂತರಾಳಗಳು |
ಏನು ವಿಸ್ಮಯ ಸೃಷ್ಟಿ!-ಮಂಕುತಿಮ್ಮ ||

ಭೈರವಲೀಲೆಯೀ=ಭೈರವ+ಲೀಲೆಯು+ಈ,
ಭೂತಗ್ರಾಮನರ್ತನೋನ್ಮಾದ=ಭೂತ+ಗ್ರಾಮ+ನರ್ತನ+ಉನ್ಮಾದ, ಏನಗ್ನಿ=ಏನು+ಅಗ್ನಿ.
ಭೈರವ=ಪರಮ ಶಿವ, ರುದ್ರ, ಉನ್ಮಾದ=ಉದ್ವೇಗ, ಗೋಳ=ಉಂಡೆ, ವಿಸ್ಮಯ=ಆಶ್ಚರ್ಯ.

ಏನಿದು ಭೈರವ ಲೀಲೆ? ಏನಿದು ಇಡೀ ವಿಶ್ವದ ಸುತ್ತಾಟ? ಏನಿದು ಪಂಚ ಮಹಾಭೂತಗಳ ಮತ್ತು ಆ ಭೂತಗಳ ವಾಸಸ್ಥಳವಾದ ಆ ಮಹಾ ಚೈತನ್ಯ ಮತ್ತು ಆ ಚೈತನ್ಯದ ಉನ್ಮಾದಭರಿತ ನರ್ತನ? ಏನಿದು ಅಗ್ನಿ ಗೋಳಗಳು, ಈ ಸೃಷ್ಟಿಯ ಅಂತರಾಳ? ಆಹಾ ಎಂತಹ ಈ ವಿಸ್ಮಯ ಈ ಸೃಷ್ಟಿ! ಇದು ಈ ಮುಕ್ತಕದ ಆಂತರ್ಯದ ಭಾವ.

ರುದ್ರತಾಂಡವ ಎನ್ನುವ ಅರ್ಥದಲ್ಲಿ ಈ ವಿಶ್ವದ ಸೃಷ್ಟಿಯನ್ನು ವಿಸ್ಮಯವೆಂದು ಕರೆಯುತ್ತಾರೆ ಶ್ರೀ ಗುಂಡಪ್ಪನವರು. ಹೌದು ಇದು ವಿಸ್ಮಯವೇ ಸರಿ. ಆ ಹಿಂದೆಯೇ ವಿವರಿಸಿದಂತೆ ಸೌರವ್ಯೂಹಗಳು, ಕ್ಷೀರಪಥಗಳು, ಆಕಾಶಗಂಗೆಗಳು ಮತ್ತು ಇಡೀ ವಿಶ್ವ. ಈ ವಿಶ್ವದ ಆಂತರ್ಯದಲ್ಲಿ ನಡೆಯುವ ಅಗ್ನಿಸ್ಫೋಟಗಳು, ಹೊಸ ಹೊಸ ನಕ್ಷತ್ರಗಳ, ಗ್ರಹಗಳ ಹುಟ್ಟು, ಸಿಡಿತ, ಒಂದರೊಳಗೆ ಒಂದು ವಿಲೀನವಾಗುವ ಪ್ರಕ್ರಿಯೆ, ಇವೆಲ್ಲವನ್ನೂ ನಾವು ಕಾಣುವುದಿರಲಿ, ಊಹಿಸಲೂ ಅಸಾಧ್ಯವಾದ ರೂಪ. ಅದನ್ನು ಪರಶಿವನ ಅಥವಾ ನಟರಾಜನ ರುದ್ರ ತಾಂಡವಕ್ಕೆ ಹೋಲಿಸುತ್ತಾರೆ. ಈ ಸೃಷ್ಟಿ, ಸೃಷ್ಟಿಯಲ್ಲಿನ ಪಂಚ ಮಹಾಭೂತಗಳು ಮತ್ತು ಅವುಗಳ ಕಾರ್ಯ ವೈಖರಿಯೂ ಸಹ, ಊಹಾತೀತ. ಇದೊಂದು ಯಾರಿಗೂ ಅರ್ಥವಾಗದ ವಿಸ್ಮಯವೆನ್ನುತ್ತಾರೆ ಮಾನ್ಯ ಗುಂಡಪ್ಪನವರು.

152 ದಶಲಕ್ಷ ಕಿಲೋಮೀಟರ್ ದೂರದಲ್ಲಿರುವ ನಮ್ಮ ಸೌರಮಂಡಲದ ಸೂರ್ಯನಿಂದ ಹೊರಟ ಬೆಳಕು ಭೂಮಿಯನ್ನು ತಲುಪಲು ಬೇಕಾಗುವ ಸಮಯ 8.28 ನಿಮಿಷಗಳು. ಸೂರ್ಯ ಒಂದು ನಕ್ಷತ್ರ. ನಮಗೆ ಆಕಾಶದಲ್ಲಿ ಕಾಣುವ ಅನ್ಯ ಅನೇಕ ನಕ್ಷತ್ರಗಳಂತೆ. 152 ದಶಲಕ್ಷ ಕಿಲೋಮೀಟರ್ ದೂರದಲ್ಲಿದ್ದರೂ ಇಷ್ಟು ಹತ್ತಿರದಲ್ಲಿ ಕಂಡಂತೆ ಕಂಡು ಇಷ್ಟು ಬೆಳಕನ್ನು ಮತ್ತು ಶಾಖವನ್ನು ನೀಡುತ್ತಾನೆ. ಬೇಸಿಗೆ ಕಾಲದಲ್ಲಿ ಅವನ ಶಾಖವನ್ನು ತಡೆಯಲಾರದೆ ಸಾವನ್ನಪ್ಪುವ ಜನರೆಷ್ಟೋ! ಇದನ್ನೇ ಅಗ್ನಿ ಗೋಳವೆಂದರು ಶ್ರೀ ಗುಂಡಪ್ಪನವರು.

ವಾಚಕರೆ ಯೋಚಿಸಿ, ಇಷ್ಟು ಹತ್ತಿರ ಕಾಣುವ ನಮ್ಮ ಸೂರ್ಯನೇ 152 ದಶಲಕ್ಷ ಕಿಲೋಮೀಟರ್ ದೂರದಲ್ಲಿದ್ದಾನೆಂದರೆ, ಇನ್ನು ನಮ್ಮ ಕಣ್ಣಿಗೆ ಬೆಳ್ಳಿ ಚುಕ್ಕಿಯಂತೆ ಕಾಣುವ ಎಷ್ಟೋನಕ್ಷತ್ರಗಳು ಎಷ್ಟು ದೂರದಲ್ಲಿರಬೇಕು? ನಮ್ಮ ಸೌರಮಂಡಲದ ಸೂರ್ಯನ ನಂತರ ನಮಗೆ ಹತ್ತಿರದಲ್ಲಿರುವ ನಕ್ಷತ್ರವೆಂದರೆ "ಆಲ್ಫಾ ಸೆಂಚ್ಯುರಿ" ಅಥವಾ "ಮ್ಯಾಗ್ನಿಮಾ ಸೆಂಚ್ಯುರಿ". ಇದು ನಮಗೆ ಎಷ್ಟು ದೂರದಲ್ಲಿದೆಯೆಂದರೆ, ಅಲ್ಲಿಂದ ಹೊರಟ ಬೆಳಕು ನಮ್ಮ ಭೂಮಿಯನ್ನು ತಲುಪಬೇಕಾದರೆ 4.7 ವರ್ಷಗಳು ಬೇಕಾಗುತ್ತದೆ. ಇನ್ನೂ ದೂರದಲ್ಲಿರುವ ನಕ್ಷತ್ರಗಳ ದೂರವೆಷ್ಟೋ, ನಮಗೆ ಕಾಣದಿರುವ ನಕ್ಷತ್ರಪುಂಜಗಳೆಷ್ಟೋ!! ಅಂದರೆ ಈಗ ನಾವು ಒಂದು ನಕ್ಷತ್ರವನ್ನು ನೋಡುತ್ತಿದ್ದೇವೆ ಎಂದರೆ ಅಲ್ಲಿಂದ ಎಂದೋ ಹೊರಟ ಬೆಳಕನ್ನು ನಾವು ಇಂದು ನೋಡುತ್ತಿದ್ದೇವೆ ಎಂದು ಅರ್ಥ. ಹಾಗೆ ನಮಗೆ ಕಾಣುವ ಅತೀ ದೂರದ ನಕ್ಷತ್ರ ನಮಗಿಂತ ಎಷ್ಟು ದೂರದಲ್ಲಿರಬಹುದು. ಕಾಣುವುದೇ ಎಷ್ಟೋ ದೂರದಲ್ಲಿದ್ದರೆ ಕಾಣದ್ದೆಷ್ಟೋ ಯಾರಿಗೆ ಗೊತ್ತು. ಇಂತಹ ವಿಶ್ವ, ನಮ್ಮ ಯೋಚನೆಗೂ ನಿಲುಕದ ಅದ್ಭುತ ಸೃಷ್ಟಿ. ಇದನ್ನೇ ಮಾನ್ಯ ಗುಂಡಪ್ಪನವರು "ಏನಂತರಾಳಗಳು ಏನು ವಿಸ್ಮಯ ಸೃಷ್ಟಿ!!!!!" ಎಂದರು.

ಈ ಸೃಷ್ಟಿಯ ಗೂಢ ನಿಗೂಢ ವಿಸ್ಮಯಗಳು. ಅಬ್ಬ! ಎಂತಹ ವಿಚಿತ್ರ. ಇದನ್ನೇ ಗುಂಡಪ್ಪನವರು ವಿಸ್ಮಯ ಅಥವಾ ವಿಚಿತ್ರವೆನ್ನುತ್ತಾರೆ. ಈ ಸೃಷ್ಟಿಯನ್ನು ಒಂದು ಸೂತ್ರದಲ್ಲಿ ಹಿಡಿದಿಟ್ಟಿರುವ ಆ ಪರಮ ಶಕ್ತಿ. ಇವುಗಳ ಮುಂದೆ ನಾವೆಷ್ಟರವರು? ನಮ್ಮ ಸಾಮರ್ಥ್ಯದ ಮಿತಿ ಏನು? ನಾವು ಅಹಂಕಾರಪಡಲು ಏನಾದರೂ ಕಾರಣವಿದೆಯೇ? ಯೋಚಿಸಿ ವಾಚಕರೆ. ಈ ವಿಸ್ಮಯಭರಿತ ಮತ್ತು ವಿಚಿತ್ರವಾದ ವಿಶ್ವ, ಅದರ ನಿಗೂಢತೆ ಮತ್ತು ಇದರ ಸೃಷ್ಟಿಕರ್ತನ ಸಾಮರ್ಥ್ಯಗಳನ್ನು ಅವಲೋಕಿಸೋಣವೇ? ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಪ್ರಾಯೋಜಕರ ನೆರಳಿನಲ್ಲಿ.....

ಸುರುಳಿ ಬಿಚ್ಚಿ ನೋಡಿದೆ.

ಕುಂಬಳಕಾಯಿಯ ಗಾತ್ರದ ನೂರಾರು ಮುಖಗಳು ಕಂಡವು. ಕೆಳಭಾಗದಲ್ಲಿ ಅಡ್ಡಗೆರೆಯೊಂದನ್ನು ಎಳೆದಿತ್ತು. ಗೆರೆಯ ಕೆಳಗೆ ಒಂದು ಹುಡುಗಿ ಮತ್ತು ಹುಡುಗನ ಸ್ಟಾಂಪ್ ಸೈಝ್ ಫೋಟೋ.

"ಏನೋ ಇದು ಸೀನು? ಇವರಿಬ್ಬರೂ ಎಲೆಕ್ಷನ್‌ಗೆ ನಿಲ್ತಿದಾರೇನೋ?" ಎಂದೆ.

"ಸೂಕ್ಷ್ಮದಿಂ ಗಮನಿಸು. ಕೆಳಗೆ ಸಣ್ಣಕ್ಷರಗಳಲ್ಲಿ ಬರೆದಿರುವುದನ್ನು ಓದುವಂಥವನಾಗು"

ಬೂದುಗಾಜು ಹಿಡಿದು ನೋಡಿದೆ. ಜಾಹೀರಾತಿನಲ್ಲಿ ಸ್ಟಾರ್ ಹಾಕಿ ಕಂಡೀಶನ್ಸ್ ಎಂದು ಕಂಡುಬರುವ ಸಣ್ಣಿರುವೆಗಳ ಸಾಲಿನ ಗಾತ್ರದ ಅಕ್ಷರಗಳಲ್ಲಿ "ಸೀಮಾ ವೆಡ್ಸ್ ಮಾಮಾ" ಎಂದಿತ್ತು.

"ಚೆನ್ನಾಗಿದೆ. ಸಂಜು ವೆಡ್ಸ್ ಗೀತಾ ತರಹದ್ದೇ ಇನ್ನೊಂದು ಸಿನೆಮಾನಾ?"

"ಅಲ್ಲ"

"ಸೀರಿಯಲ್ಲಾ?"

"ದಡ್ಡ. ಇದು ನನ್ನ ಮಗಳ ಮದುವೆಯ ಇನ್ವಿಟೇಶನ್ ಕಣೋ" ಸ್ಪಷ್ಟಪಡಿಸಿದ ಸೀನು.

"ಮಾಮಾ ಎಂದರೆ? ಸೋದರಮಾವನಿಗೇ ಹೆಣ್ಣು ಕೊಡ್ತಿರೋದಾ?"

"ಮಾಮಾ ಅನ್ನೋದು ಷಾರ್ಟ್ ಫಾರ್ಮ್; ಮಾರ್ಕೆಟಿಂಗ್ ಮಾರ್ವೆಲ್ ಅಂತ ಅವನ ಬಿರುದು"

"ಹೆಸರು?"

"ಮಾರೇನಹಳ್ಳಿ ಮಾಧೂರಾಯ. ಓಲ್ಡ್ ಫ್ಯಾಶನ್ಡ್ ಹೆಸರು ಅಂತ ಮಾಮಾ ಅಂತ ಬದಲಾಯಿಸಿಕೊಂಡಿದಾನೆ"



"ಇವರೆಲ್ಲ ಯಾರು?"

"ಮದುವೆ ಸ್ಪಾನ್ಸರ್ ಮಾಡುವವರು."

"ವಧು-ವರರೇ ಕಾಣೋದಿಲ್ಲವಲ್ಲೋ.... ಇದೇನೋ ಈ ಅವಸ್ಥೆ? ಎಷ್ಟು ಖರ್ಚಾಯ್ತೋ ಇದಕ್ಕೆ?"

"ಏನೇನೂ ಇಲ್ಲ. ಇನ್ ಫ್ಯಾಕ್ಟ್ ನನಗೇ ಅರವತ್ತು ಸಾವಿರ ಬಂದಿದೆ."

"ಹೇಗೆ?"

"ಅಳೀಮಯ್ಯನ ಕಾಲ್ ಗುಣ"

"ಅಂದರೆ?"

"ಮಾರ್ಕೆಟಿಂಗಲ್ಲಿರೋ ಅಳೀಮಯ್ಯ ಕಾಲ್ ಮಾಡಿದರೆ ಜಾಹೀರಾತು, ಸ್ಪಾನ್ಸರ್ಗಳು ಲಭ್ಯ. ಇದೇನು ಮಹಾ... ಮದುವೆಗೆ ಬಂದು ನೋಡು. ಮಜ ಇರತ್ತೆ. ಸೀಯೂ..." ಎನ್ನುತ್ತಾ ಹೊರಟ. ಅವನನ್ನೇ ಹಿಂಬಾಲಿಸಿ ಹೊರಬಂದೆ.

ಮದುವೆಯ ದಿನ ಬಂತು. "ಬರ್ತೀಯೇನು?" ಎಂದೆ ಮಡದಿಗೆ.

"ಇಂಪಾಸಿಬಲ್. ಇವತ್ತು ಎರಡರಲ್ಲೊಂದು ತೀರ್ಮಾನ ಆಗ್ಲೇಬೇಕ್" ಎಂದಳು ಮಡದಿ. ಮುಖದಲ್ಲಿ ಕಾದ ಕೆಂಡದ ಬಿಸುಪಿಲ್ಲ. ದನಿಯಲ್ಲಿ ಖಾರವಿಲ್ಲ. ಹಾಗಾದರೆ ಜಗಳವಿಲ್ಲ. ಆದರೂ ಈ ಮಾತು!!!!

ಬೆದರಿದ ಹುಲ್ಲೆಯ ನೋಟ ಬೀರಿದೆ.

"ನಿಮ್ಮ ವಿಷಯ ಅಲ್ಲ. ಕೋತಿಸಾಕ್ಷಿ ಸೀರಿಯಲ್‌ನಲ್ಲಿ ಇವತ್ತು ಅತ್ತೆ, ಸೊಸೆ ಇಬ್ಬರಲ್ಲಿ ಯಾರಿಗೆ ವಿಷ ಹಾಕ್ತಾರೆ ಅನ್ನೋದು ತೀರ್ಮಾನ ಆಗ್ಬೇಕ್. ಅದನ್ನ ಬಿಟ್ಟು ಚಿಲ್ರೆ ಮದುವೆಗಳನ್ನ ಅಟೆಂಡ್ ಮಾಡಕ್ಕೆ ನನಗಿಷ್ಟವಿಲ್ಲ" ಘಂಟಾಘೋಷ ಮೊಳಗಿತು.

ಮೊದಲೇ ಹೇಳಿಬಿಡುತ್ತೇನೆ. ಸೀನು ಅನುಕೂಲಸ್ಥನಲ್ಲ; ಆದರೆ ವ್ಯವಹಾರಸ್ಥ. ಅವನ ಮಗಳ ಮದುವೆ ಹೆಚ್ಚೆಂದರೆ ಒಂದು ಲಕ್ಷ ರೂಪಾಯಿ ಬಾಡಿಗೆಯ ಕಲ್ಯಾಣಮಂಟಪದಲ್ಲಿ ನಡೆದೀತು, ಅಷ್ಟೆಲ್ಲ ಸ್ಪಾನ್ಸರ್ಗಳ ಕೃಪೆಯಿಂದ ಒಂದು ಸರಳ ವಿವಾಹ ನಡೆದೀತು ಎಂಬ ಕಲ್ಪನೆ ಮಾತ್ರ ನನಗಿತ್ತು. ಈ ಕಲ್ಪನೆಯನ್ನು ತಲೆಯಲ್ಲಿ ಹೊತ್ತೇ ಕಲ್ಯಾಣಮಂಟಪದತ್ತ ನಡೆದೆ. ಅದರ ಮುಂದೆ ನಿಂತು ಬೆಕ್ಕಸಬೆರಗಾದೆ, ಸ್ತಂಭೀಭೂತನಾದೆ. ನಿಶ್ಚೇಷ್ಟಿತನಾದೆ. ಇನ್ನೂ ಏನೇನೋ ಆದೆ.

ದೊಡ್ಡ ಮೈದಾನದಲ್ಲಿ ನಿರ್ಮಿಸಿದ ಬೃಹತ್ ಕಲ್ಯಾಣಮಂಟಪಕ್ಕೆ ಹೋಲಿಸಿದರೆ ಗಾಲಿರೆಡ್ಡಿಯ ಮಗಳ ಮದುವೆಯ ಚೌಲ್ಟ್ರಿ ಗುಡಿಸಲಿಗೆ ಸಮ! ಜೈಂಟ್ ವೀಲ್‌ನಷ್ಟು ಎತ್ತರದ ಕಮಾನಿನ ಮೇಲೆ 'ದಿಸ್ ವೆಡ್ಡಿಂಗ್ ಈಸ್ ಸ್ಪಾನ್ಸರ್ಡ್ ಬೈ ಲಾಸ್ಟ್ ರೈಟ್ಸ್ ಫ್ಲವರ್ ಡೆಕೊರೇಟರ್ಸ್' ಎಂದಿತ್ತು. ಮಧ್ಯದಲ್ಲಿ ಸಣ್ಣಾತಿಸಣ್ಣ ಅಕ್ಷರಗಳಲ್ಲಿ 'ಸೀಮಾ ವೆಡ್ಸ್ ಮಾಮಾ' ಎಂದಿತ್ತು. ಹೂವಿನ ಕಮಾನಿನ ಎರಡೂ ಪಕ್ಕದಲ್ಲಿ ಬೃಹತ್ತಾದ ಕಟೌಟ್‌ಗಳಿದ್ದವು.

ಮುಂದಿನ ಪುಟ ನೋಡಿ ...

“ಲಗ್ನಕ್ಕೆ ಶುಭ ಕೋರುತ್ತಿರುವವರು ಬ್ಯಾಂಕೇಶ್ ಟೋಪಿವಾಲಾ ಡ್ರೈಕ್ಲೀನರ್ಸ್ - ನಮ್ಮಲ್ಲಿ ನಿಮ್ಮ ಕಪ್ಪುಹಣವನ್ನು ಬಿಳಿ ಮಾಡಿಕೊಡಲಾಗುತ್ತದೆ” ಎಂದಿತೊಂದು ಕಟೌಟ್.

“ಈ ಪರಿಣಯ ಸಹ ಪ್ರಾಯೋಜಿಸುತ್ತಿರುವವರು ಮದಿರಾ ಕೋಟ್ಸ್; ಮದಿರೆಯ ಅಮಲಿನಲ್ಲಿ ಆಡುವ ಮಾತುಗಳನ್ನು ಗ್ರೀಟಿಂಗ್‌ಕಾರ್ಡ್‌ಗಳಲ್ಲಿ ಅಳವಡಿಸಿ ಮಾರುವ ಫುಲ್‌ಟೈಟ್ ಕಂಪನಿಗೆ ಇಂದೇ ಭೇಟಿ ನೀಡಿ” ಎಂದಿತೊಂದು ಕಟೌಟ್.

ಬಾಗಿಲಿನ ಬಳಿ ಸಾರಿದೆ. ತಂಪನೆಯ ಸುವಾಸಿತ ಸಿಂಪಡಣೆ ಹಿತವೆನಿಸಿತು. ಹಿಂದೆಯೇ “ಯೂ ಆರ್ ಬೀಯಿಂಗ್ ವೆಲ್‌ಕಮ್ಡ್ ಬೈ ವೆಲ್‌ಕಮ್ ಗ್ರೂಪ್ ಆಫ್ ಕಂಪನೀಸ್. ನಿಮಗೆ ಸ್ಪ್ರಿಂಕಲ್ ಮಾಡುತ್ತಿರುವವರು ಸುಗಂಧ ಸ್ಪ್ರಿಂಕ್ಲರ್ಸ್ ಸಿಂಡಿಕೇಟ್. ನೀರಿನ ಬರದಿಂದ ವಾರಕ್ಕೊಮ್ಮೆ ಸ್ನಾನ ಮಾಡುವವರ ದುರ್ಗಂಧ ನಿವಾರಣೆಗೆ ನೆನಪಿರಲಿ ಎಸ್‌ಎಸ್‌ಎಸ್ - ಸುಗಂಧ ಸ್ಪ್ರಿಂಕ್ಲರ್ಸ್ ಸಿಂಡಿಕೇಟ್. ಠಣ್‌ಠಣಾಣ್” ಎಂದಿತೊಂದು ಸವಿನುಡಿಯ ಜಿಂಗಲ್.

ಮದುವೆಯ ಮಂಟಪದತ್ತ ನೋಡಿದೆ. ನೋಟು ನಿಷೇಧದ ಮೂರನೆಯ ದಿನ ಎಟಿಎಂ ಮುಂದಿದ್ದ ಕ್ಯೂ ಇದರ ಮುಂದೆ ಬಚ್ಚಾ! ಅಷ್ಟರಲ್ಲಿ ಸೂಟುಧಾರಿಯೊಬ್ಬ ನನ್ನ ಕೈಹಿಡಿದು “ಪ್ಲೀಸ್ ಕಮ್ ದಿಸ್ ಸೈಡ್ ಸರ್. ಈ ಟಿಶ್ಯೂ ತೊಗೊಳಿ, ಕೈ ಒರೆಸಿಕೊಳ್ಳಿ.” ಎಂದ. ಕೈ ಚಾಚಿದೆ. “ದಿಸ್ ಟಿಶ್ಯೂ ಈಸ್ ಸ್ಪಾನ್ಸರ್ಡ್ ಬೈ ಸ್ವಚ್ಛ್ ಹಸ್ತ್ ಅಭಿಯಾನ್ ಪ್ರೈವೇಟ್ ಲಿಮಿಟೆಡ್” ಎಂದು ಜಿಂಗಲ್ ನುಡಿಸಿದ ನಂತರ ಟಿಶ್ಯೂ ಕೈಗಿತ್ತ.

ಡೈನಿಂಗ್ ಹಾಲ್‌ನಲ್ಲಿ ಗೋಡೆಯೇ ಕಾಣದಷ್ಟು ಜಾಹೀರಾತಿನ ಭರಾಟೆ. “ನಿಮಗೆ ಇಡ್ಲಿಯ ಬಿಳುಪಿನ ತ್ವಚೆ ಬೇಕೆ? ಈಗಲೇ ಬಳಸಿ ದಾರೂ ವೈಟ್ ಸ್ನೋ” ಎಂದಿತೊಂದು ಫಲಕ. “ನೀವು ನೂಡಲ್‌ಸ್‌ನಂತೆ ಉದ್ದವಾದ ಕೇಶರಾಶಿ ಹೊಂದಬೇಕೆ? ತಿಮ್ಮಾಯಿ ತಲೆಕಾಯಿ ಹೇರಾಯಿಲ್ ಬಳಸಿ” ಎಂದಿತೊಂದು ಪಾಂಪ್ಲೆಟ್. ತಿಂಡಿಯ ಟ್ರಾಲಿಯೊಂದು ಎರಡು ಟೇಬಲ್‌ಗಳ ನಡುವೆ ಕನ್ನಡ ರಾಜ್ಯೋತ್ಸವದಂದು ಮೆರವಣಿಗೆಯಲ್ಲಿ ಬರುವ ಟ್ಯಾಬ್ಲೋಗಳಂತೆ ತೇಲಿಬಂತು. ಟ್ರಾಲಿಯ ಆರಡಿ ಎತ್ತರದ ಕಮಾನಿನ ಮೇಲೆ “ದಿಸ್ ಬ್ರೇಕ್‌ಫಾಸ್ಟ್ ಈಸ್ ಸ್ಪಾನ್ಸರ್ಡ್ ಬೈ ನೋ ಸ್ಕಿಡ್ ಬ್ರೇಕ್ ಆಯಿಲ್” ಎಂದು ದಪ್ಪ ಅಕ್ಷರಗಳಲ್ಲಿ ಬರೆದಿತ್ತು. “ವಡೆಯನ್ನೂ ಬ್ರೇಕ್ ಆಯಿಲ್‌ನಲ್ಲೇ ಕರೆದಿದ್ದೀರೇನು?” ಎಂದು ಕೇಳಿದೆ. ಮೋಹಕ ನಗೆ ಬೀರುತ್ತಾ “ಟೇಸ್ಟ್ ಮಾಡಿ ನೀವೇ ಹೇಳಿ ಸಾರ್” ಎಂದಳೊಬ್ಬ ಬೆಡಗಿ.

ಬಡಿಸುವವರು ತಟ್ಟೆ ಇಡುವಾಗ “ದಿಸ್ ತಟ್ಟೆ ಈಸ್ ಸ್ಪಾನ್ಸರ್ಡ್ ಬೈ ಮಡದಿ ಹಾರುವತಟ್ಟೆ ಕಂಪನಿ. ಕೋಪದಿಂದ ಎಸೆದರೂ ನಜ್ಜುಗುಜ್ಜಾಗದ ಸೂಪರ್ ಕ್ವಾಲಿಟಿ ತಟ್ಟೆ” ಎಂದರು. ನೀರಿನ ಬಾಟಲನ್ನು ಇಡುವಾಗ “ಸೂಪರ್ ಕ್ಲೀನ್ ವಾಟರನ್ನೇ ಕುಡಿಯಿರಿ. ಇದರಲ್ಲಿನ ಪ್ರಿಸರ್ವೇಟಿವ್‌ಗಳು ನಿಮ್ಮ ಹೊಟ್ಟೆಯಲ್ಲಿರುವ ಕ್ರಿಮಿಗಳನ್ನು ಕೊಂದುಬಿಡುತ್ತವೆ” ಎಂದರು.

ಸ್ಪಾನ್ಸರ್ ಭರಿತ ತಿಂಡಿ ಮುಗಿಸಿ ಡೈನಿಂಗ್ ಹಾಲ್‌ನಿಂದ ಹೊರಬಂದು, ಕ್ಯೂನಲ್ಲಿ ನಿಂತ ಎರಡೇ ಗಂಟೆಗಳಲ್ಲಿ ಗಂಡು-ಹೆಣ್ಣಿನ ಬಳಿ ಸಾಗಿದೆ. ಗಂಡು-ಹೆಣ್ಣಿನ ತಲೆಗೆ ಡಿಜಿಟಲ್ ಟೋಪಿಗಳನ್ನು ತೊಡಿಸಲಾಗಿತ್ತು. ಆ ಟೋಪಿಗಳಲ್ಲಿ ಶರ್ಟ್, ಪ್ಯಾಂಟ್, ಸೂಟ್, ಟೈ, ಶೂಸ್, ಹೇರ್‌ಕ್ಲಿಪ್, ಲಿಪ್‌ಸ್ಟಿಕ್, ಮಸ್ಕರಾ, ಗೌನ್, ಹೇರ್‌ಸ್ಪ್ರೆಲ್, ಒಳ ಉಡುಪುಗಳು, ಎಲ್ಲದರ ಸ್ಪಾನ್ಸರ್ ಮಾಡಿದವರ ಹೆಸರುಗಳು ಒಂದರ ಹಿಂದೊಂದು ಮೂಡಿಬರುತ್ತಿದ್ದವು. ಸಂಪೂರ್ಣ ಜಾಹೀರಾತು ಓದುವವರೆಗೆ ವೇದಿಕೆ ಏರಿದವರು ನಿಂತಿರಲೇಬೇಕೆಂದು ಸ್ಪಾನ್ಸರ್ ಮಾಡಿದವರು ಕಂಡೀಷನ್ ಹಾಕಿದ್ದರಿಂದ ಎಲ್ಲವನ್ನೂ ಓದುವ ಹೊತ್ತಿಗೆ ತಲೆ ಕೆಟ್ಟು ಮೊಸರಿನ ಗಡಿಗೆಯಾಯಿತು.

ಉಡುಗೊರೆಯಿತ್ತು, ಕೈ ಕುಲುಕಿ, ಹೊರಹೊರಟೆ. ಯಾವುದೋ ಮಾಯದಲ್ಲಿ ಯಾರೋ ನನ್ನ ಕೈಗೆ ತಾಂಬೂಲವೊಂದನ್ನು ತುರುಕಿ “ದಿಸ್ ತಾಂಬೂಲ ಈಸ್ ಸ್ಪಾನ್ಸರ್ಡ್ ಬೈ ಇಂಟರ್‌ನ್ಯಾಶನಲ್ ತಂಬೂಲ ಎಂಟರ್ಪ್ರೈನರ್ಸ್” ಎಂದ.

“ಊಟ ಮಾಡಿಕೊಂಡು ಹೋಗಿ” ಎಂದಳು ಸೀಮಾ. ಇಷ್ಟಕ್ಕೇ ಇಷ್ಟೊಂದು ಜಾಹೀರಾತಾದರೆ ಊಟಕ್ಕೆ ಇನ್ನೆಷ್ಟು ಇರಬಹುದು! ಊಹೆ ಮಾತ್ರದಿಂದಲೇ ಮೈ ಬೆವರಿತು; ಕಣ್ಣು ಕತ್ತಲಿಟ್ಟಂತಾಯಿತು. ನಿಂತಲ್ಲೇ ಕುಸಿದೆ.

ಕಣ್ಬಿಟ್ಟಾಗ “ದಿಸ್ ಕೂಲ್ ಏರ್ ಈಸ್ ಸ್ಪಾನ್ಸರ್ಡ್ ಬೈ ಹಿಮಾಲಯನ್ ಫ್ಯಾನ್ಸ್” ಎಂದಿತೊಂದು ಧ್ವನಿ. ಯಾರೋ ಪಾನಕದ ಲೋಟವನ್ನು ತಂದು ಕೈಗಿಡುತ್ತಾ “ದಿಸ್ ಡ್ರಿಂಕ್ ಈಸ್ ಸ್ಪಾನ್ಸರ್ಡ್ ಬೈ.....” ಎನ್ನಲಾರಂಭಿಸಿದರು.

ಮತ್ತೆ ಮೈ ಬೆವರುತ್ತಿದೆ; ಕತ್ತಲೆ ಕವಿಯುತ್ತಿದೆ. ಸ್ಮೃತಿ ತಪ್ಪುತ್ತಿದೆ. ಈ ಪರಿಯ ಜಿಂಗಲ್‌ಗಳು ಕಿವಿಗೆ ಬೀಳದಂತೆ, ಇನಿತಿನಿತು ಜಾಹೀರಾತುಗಳು ಕಣ್ಣಿಗೆ ಕಾಣದಂತೆ ಎನ್ನ ಕಿವುಡನ್ನ ಮಾಡಯ್ಯ ತಂದೆ... ಎನ್ನ ಕುರುಡನ್ನ ಮಾಡಯ್ಯ ತಂದೆ.... ▪

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ವಿಕ್ರಂ ಬೇತಾಳ – ಅಂತಿಮ ಕ್ರಿಯೆ

ಕನಕಾಪುರ ನಾರಾಯಣ

ಲೀಲಾವತಿ ಎಂಬ ಹೆಣ್ಣು ಒಬ್ಬ ಕಳ್ಳನನ್ನು ಮದುವೆಯಾಗುವ ಪ್ರಸಂಗ ಬಂದಿತು. ವಿವಾಹದ ನಂತರ ಆತ ಕಳ್ಳತನ ಮಾಡುವ ಕೆಟ್ಟ ಹುದ್ದೆಯನ್ನು ಬಿಟ್ಟು ನೀಯತ್ತಿನ ಬದುಕು ನಡೆಸುವ ಪ್ರಯತ್ನ ಮಾಡಿದ. ಈ ನಡುವೆ ಅವರಿಗೆ ಒಂದು ಗಂಡುಮಗು ಜನಿಸಿತು. ಇಬ್ಬರನ್ನು ಸಾಕಿ ಸಲಹುವ ಜವಾಬ್ದಾರಿ ಆತನಿಂದಾಗದೆ ಮತ್ತೆ ಕಳ್ಳತನದ ಹುದ್ದೆಗೆ ಮರಳಿದ. ಒಮ್ಮೆ ಅಪಘಾತವೊ ಅನಾರೋಗ್ಯವೇ ಆತನ ಮರಣವಾಯಿತು. ರೂಪವಂತಳಾದ ಲೀಲಾವತಿಯನ್ನು ವ್ಯಾಪಾರಿಯೊಬ್ಬ ಮದುವೆಯಾದ. ಅವಳ ಮಗನನ್ನು ಸ್ವಂತ ಮಗನಂತೆ ನೋಡಿಕೊಂಡು ಪ್ರೀತಿಯಿಂದ ಸಾಕಿ ಸಲುಹಿದ. ಕಾಲಕ್ರಮೇಣ ವ್ಯಾಪಾರಿ ಮತ್ತು ಲೀಲಾವತಿಯರ ಮರಣವಾಯಿತು.ಅಂತಿಮ ಸಂಸ್ಕಾರ ಮುಗಿಸಲು ನದಿಯ ತೀರಕ್ಕೆ ಬರಲು ಅಲ್ಲಿ ಮೂರು ಜೊತೆಯ ಕೈಗಳು ನೀರಿನಿಂದ ಮೇಲೆ ಬಂದು ತರ್ಪಣ ಸ್ವೀಕರಿಸಲು ಚಾಚಿದವು. ಮಗ ತನ್ನ ತಾಯಿಯ ಧ್ವನಿ ಕೇಳಿ ಆಕೆಯ ಕೈಯನ್ನು ಗುರುತಿಸಿದ. ಕಥೆ ಅಲ್ಲಿಗೇ ನಿಲ್ಲಿಸಿತು ಬೇತಾಳ.....

ಬೇತಾಳದ ಪ್ರಶ್ನೆ: ಉಳಿದೆರಡು ಜೊತೆಯ ಕೈಗಳಲ್ಲಿ ಯಾವ ತಂದೆಗೆ ಅಂತಿಮ ಸಂಸ್ಕಾರ ಸಲ್ಲಬೇಕು?

ವಿಕ್ರಮನ ತತ್ಕ್ಷಣದ ಉತ್ತರ: ವ್ಯಾಪಾರಿ ತಂದೆಗೆ ಎಂದಿತ್ತು. ಕಾರಣ ಹೇಳಲು ಪೀಡಿಸಿದ ಬೇತಾಳಕ್ಕೆ ವಿಕ್ರಮನು " ಯಾಕೆಂದರೆ ವ್ಯಾಪಾರಿ ತನ್ನ ಪ್ರೀತಿ ವಿಶ್ವಾಸದಿಂದ ಬೆಳಸಿ ದುಡಿದು ನ್ಯಾಯದ ಹಾದಿಯಲ್ಲಿ ಬದುಕಲು ಕಳಿಸಿದ. ಆದರೆ ಕಳ್ಳನು ಬರೀ ಜನ್ಮವಿತ್ತನೇ ಹೊರತು ತನ್ನ ಕೆಟ್ಟ ಹುದ್ದೆ ಬಿಡಲಿಲ್ಲ" ಅದನ್ನು ಕೇಳಿ ಬೇತಾಳವಂತೂ ವಿಕ್ರಮನ ಬೆನ್ನು ಬಿಟ್ಟು ಹಾರಿಹೋಯಿತು. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ “ಚಕ್ಕೆ ಮೊಗ್ಗು”

ಸುದರ್ಶನ್. ಏನ್
ಇವರ “ಅನಿವಾಸಿ”



ಬದರಿ ತ್ಯಾಮಗೊಂಡ್ಲು
ಇವರ “ಕಾವ್ಯ ಕಸ್ತೂರಿ”

ಸ್ಮಿತಾ ಮೇಲ್ಕೋಟೆ
ಇವರ “ಮಂದಹಾಸ”

ಮಹಾಂತೇಶ್ ಸಿ.
ಇವರ “ಹಂಗ ಸುಮ್ನ್...”

ಈರುಳ್ಳಿ ಟೋಸ್ಟ್

ಬೇಕಾಗುವ ಸಾಮಗ್ರಿಗಳು

- ಬ್ರೆಡ್ ಒಂದು ಪೌಂಡ್, ಹೆಚ್ಚಿದ ಈರುಳ್ಳಿ 250 ಗ್ರಾಂ, ಹೆಚ್ಚಿದ ಹಸಿ ಮೆಣಸಿನ ಕಾಯಿ
- ಅರಿಸಿನಪುಡಿ ಕಾಲು ಚಮಚ, ಗರಂಮಸಾಲೆ ಪುಡಿ ಕಾಲು ಚಮಚ, ಎಣ್ಣೆ ಮೂರು ಚಮಚ
- ಹೆಚ್ಚಿದ ಕೊತ್ತಂಬರಿ ಸೊಪ್ಪು ಎರಡು ಚಮಚ, ಬೆಣ್ಣೆ 50 ಗ್ರಾಂ, ಉಪ್ಪು ಅರ್ಧ ಚಮಚ

ಮಾಡುವ ವಿಧಾನ

- ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ ಈರುಳ್ಳಿ, ಹಸಿಮೆಣಸಿನಕಾಯಿ ಸೇರಿಸಿ ಈರುಳ್ಳಿ ಮೆತ್ತಗಾಗುವ ವರೆಗೂ ಬೇಯಿಸಿ.
- ಅರಿಶಿನ ಗರಂ ಮಸಾಲಾ,ಉಪ್ಪು,ಕೊತ್ತಂಬರಿ ಸೇರಿಸಿದ ತಕ್ಷಣ ಒಲೆಯಿಂದಿಳಿಸಿ. ಬ್ರೆಡ್ ಮೇಲೆ ಮಿಶ್ರಣ ಹರಡಿ.
- ಓವನ್ ನಲ್ಲಿ 10 ನಿಮಿಷ 160 ಡಿಗ್ರಿ ಶಾಖದಲ್ಲಿ ಬೇಯಿಸಿ (ಈರುಳ್ಳಿಯ ಜೊತೆ ವಿವಿಧ ತರಕಾರಿಕಳನ್ನೂ ಬಳಸಿ ಮಾಡಬಹುದು)

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರ ಸಿ ಪಿ ಕೊ ಡ್ತೀ ರಾ!

ಒಗಟು

೧. ಮಣ್ಣಿನಲ್ಲಿ ಹುಟ್ಟಿ , ಮಣ್ಣಿನಲ್ಲಿ ಬೆಳೆದು , ಮಣ್ಣಿನಲ್ಲಿ ಸಾಯುವುದು

೨. ಅಪ್ಪಾಂದ್ರೆ ಹೊಡಿಯುತ್ತೆ , ಅವ್ವಾಂದ್ರೆ ಹೊಡಿಯೋದಿಲ್ಲ

ಉತ್ತರಕ್ಕೆ ಪುಟ ೧೧ ನೋಡಿ

ಗೆ ...

ಇಂದೇ ಬರುವ ಚೆಲುವ, ರಾಧೇ
ನಿನ್ನ ಶ್ಯಾಮನಲ್ಲವೇ
ನಿನ್ನ ಒಲವ ಅವನಲಿಟ್ಟೆ
ಬಂದೇ ಬರುವನಲ್ಲವೇ

ನೀಲ ನಭಕೆ ಇರುಳ ಹರಕೆ
ಬಂತು ಚಂದ್ರ ತಾರಕೆ
ಬಂದೇ ಬರುವ ನಿನ್ನ ಪ್ರೇಮಿ
ಯಮುನ ನದಿಯ ತೀರಕೆ

ನಿನ್ನ ಅವನ ಅಮರ ಪ್ರೇಮ
ಲೋಕವೆಲ್ಲ ಆಳಲಿ
ಹಲವು ಚೆಲುವ ಪ್ರೇಮಿಗಳಲಿ
ನಾಕವಾಗಿ ಬಾಳಲಿ

ಬಳಿಯ ಬನದ ಮಧುರ ನಿನದ
ಅವನ ಕೊಳಲ ಉಸಿರದು
ಅವನ ಕೊರಳಲುಲಿದ ಮಾತು
ರಾಧೇ ನಿನ್ನ ಹೆಸರದು

ವಿಮುಖಳಾಗ ಬೇಡ, ಸಾಕು
ತಾಪ ಕೊಡುವ ಯೋಚನೆ
ಸುಮದ ಅಂದ ಘಮದ ಗಂಧ
ಗೋಪ ಬರುವ ಸೂಚನೆ

-ಮಾಲು, ಅಡಿಲೈಡ್

ದಿಗಂಬರನಾಗು ...

ಕಾನನದ ಹೂವಾಗು ಎಂದಿಹನು ತಿಮ್ಮಗುರು
ಅಮ್ಮನಾಡುವ ಭಾಷೆ ಕನ್ನಡದಲಿ
ತಾನನವನಾಲಿಸುತ ಸ್ನೇಹವನು ಸಲಹುತಿರು
ಸಗ್ಗಕ್ಕದೆ ದಾರಿಯೀ ಸಿರಿ ಬುವಿಯಲಿ

ಹೂವಂತೆ ಅರಳಿದರೆ ದೇವನಿಗು ಪ್ರೀತಿಯದು
ಬೇರೆ ಪೂಜೆಯು ಬೇಕೆ ಹೃದಯ ಶಿವಗೆ
ನಾವಾಡೊ ಮಾತಿನಲಿ ವಾಗರ್ಥ ಬಂಧವಿರೆ
ಅಷ್ಟೋತ್ತರವದುವೇ ಮೌನ ಶಿವೆಗೆ

ಶಿವಶಿವೆಯು ನಮ್ಮಲ್ಲಿ ಉದ್ಭವಿಸಿ ಗೋಚರಿಸೆ
ಮೀಟುವುದು ದತ್ತನಾ ನಾಲ್ಕು ತಂತಿ
ಶಂಕರನ ಭಜನೆಯು ನಮ್ಮಲ್ಲಿ ಮೊಳಗಿರಲು
ಅನುದಿನವು ಕಾಣುವೆವು ನಿಜ ಜಯಂತಿ

ಅವನ ತಂತುವು ನಾವು, ಎಲ್ಲರೂ ನಮ್ಮಂತೆ
ಎಂದು ತಿಳಿಯುತ ಕೂಡಿ ಬಾಳುತಿರಲು
ನಾಗಶೈಲನು ಬಂದು ನಮ್ಮೊಡನೆ ನಿಲ್ಲುವನು
ಕೈಲಾಸದ ಸವಿಯನು ನಮಗೆ ಕೊಡಲು

ಆ ಸವಿಯನುಣ್ಣುತಲಿ ಒಲವನ್ನು ಹರಡಿದರೆ
ಬದುಕಿಗಂಟದು ಯಾವ ರಾಗ ದ್ವೇಷ
ಶರಣು ಶರಣೆನ್ನುತಲಿ ಶರಣ ತಾನಾದರೇ
ತೊಡಲುಬೇಕಿಲ್ಲವ್ಯಾವುದೇ ವೇಷ

ಎಷ್ಟೊಂದು ತತ್ವಗಳು ಸುತ್ತಮುತ್ತಲು ಬಿರಿದು
ತಮ್ಮ ಸೌರಭವನ್ನು ಸೂಸುತಿಹುದು
ಕುಣಿದಾಡೊ ಕಪಿಮನವ ಕಟ್ಟಿ ಶಾಂತಿಯ ನಿಲಿಸೆ
ಬಂಗಾರದಾ ಬಾಳ ಬದುಕಬಹುದು

-ಬದರಿ ತ್ಯಾಮಗೊಂಡ್ಲು

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಆಳು ಮೇಯಿಸಿಕೊಂಡು ಬಂದು ಕೊಟ್ಟಿಗೆಯಲ್ಲಿ ಕಟ್ಟಿದ್ದು?

೨. ಇದನ್ನು ನುಡಿಯದಿರುವುದೂ ಅಂತರಂಗ ಬಹಿರಂಗ ಶುದ್ಧಿಗಳಲ್ಲೊಂದು.

೩. ಶಿಕ್ಷೆಗೊಳಗಾದವರ ಮನೆ.

೪. ನನಸಾಗುವ ಮೊದಲು ಆಗಬೇಕಾದ್ದು?

೫. ಓಲಗದೊಂದಿಗೆ ಬೀದಿಬೀದಿಗಳಲ್ಲಿ ಬರುತ್ತಿರುವುದೇನು?

೬. ಈ ರಂಗ ನಾಟಕದ್ದಲ್ಲ, ಸಾವುನೋವಿನದು, ಸೋಲುಗೆಲುವಿನದು.

ಉತ್ತರ:

ಗೇರುಸೊಪ್ಪೆಯ ಚೆನ್ನಭೈರಾದೇವಿಗೆ ದೊರೆತ ಪಟ್ಟದಲ್ಲಿ ಸಾಂಭಾರ ಪದಾರ್ಥವೂ ಬೆರೆತಿತ್ತು.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಜೂನ್ ೧೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಏಪ್ರಿಲ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಕೆ. ಎಸ್ ನವೀನ್, ಮಧುಗಿರಿ
- ರಾಜೇಶ್ವರಿ, ಸಿಡ್ನಿ
- ಸೌಮ್ಯ ಶ್ರೀನಾಥ್, ತುಮಕೂರು
- ವೀಣಾ ಕೌಶಿಕ್, ಸಿಡ್ನಿ

೧. ಪ್ರಭವ, ವಿಭವ... ಎಂದು ಎಣಿಸುತ್ತಾ ಹೋಗುವುದು ಅರವತ್ತು ---- ಗಳನ್ನು.

ಸಂ	ವ	ತ್ಸ	ರ

೨. ಒಬ್ಬರಿಗೆ ಜಯವಾದಾಗ ಎದುರಾಳಿಗಾಗುವುದು?

ಪ	ರಾ	ಜ	ಯ

೩. ಸದಾ ಶಾಂತಸ್ವರೂಪಿಯಾದವನೆಂದು ಹೇಳುವ ಹುಡುಗನ ಹೆಸರು.

ಪ್ರ	ಸ	ನ್ನ

೪. ಪ್ರಪಂಚಕ್ಕೇ ಬೆಳಕಾದವರೆಂದು ಬಸವಣ್ಣನವರ ಬಿರುದು.

ಜ	ಗ	ಜ್ಯೋ	ತಿ

೫. ಜಟ್ಟಿಗಳ ನಡುವೆ ನಡೆಯುವ ಸೆಣಸಾಟ.

ಕು	ಸ್ತಿ

೬. ಉತ್ತರ ಕರ್ನಾಟಕದ ಕಡೆಯಲ್ಲಿ ನಮಸ್ಕಾರ ಎನ್ನುವ ಬದಲಾಗಿ ಬಳಸುವ ವಿನಯಪೂರ್ವಕ ನುಡಿ.

ಶ	ರ	ಣು

ಉತ್ತರ: ವರ್ಷಕೊಮ್ಮೆ ಅರ್ಹ ವ್ಯಕ್ತಿಗಳಿಗೆ ರಾಜ್ಯ ಸರ್ಕಾರದಿಂದ ದೊರೆಯುವ ಮನ್ನಣೆ.

ರಾ	ಜ್ಯೋ	ತ್ಸ	ವ	ಪ್ರ	ಶ	ಸ್ತಿ

ATTENTION INVESTORS

NEW HOMES AT BLAKES CROSSING
ONLY 31KM FROM ADELAIDE CBD

Turnkey investment packages
from under $299,000*

Deposit only $2,000*

BOOK AN APPOINTMENT WITH UMESH TODAY TO START YOUR INVESTMENT JOURNEY!

Call 0401 034 456
Email umesh.nagasandra@burbank.com.au

*Terms & conditions apply

Burbank
#noplacelikehome

ಜಾಣ ಕರ್ನಾಟಕ

೧. ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿರುವ ಗಣ್ಯವ್ಯಕ್ತಿಗಳಿಗೆ ನೃಪತುಂಗ ಪ್ರಶಸ್ತಿಯನ್ನು ನೀಡಲಾಗುತ್ತದೆ. ಎರಡು ಸಂಸ್ಥೆಗಳ ಸಹಭಾಗಿತ್ವದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈ ಎರಡು ಸಂಸ್ಥೆಗಳು ಯಾವುವು? ೨೦೧೬ ಸಾಲಿನ ಈ ಪ್ರಶಸ್ತಿಯನ್ನು ಪಡೆದಿರುವ ಗಣ್ಯರು ಯಾರು?

೨. ಪ್ರತಿಷ್ಠಿತ ಪಂಪ ಪ್ರಶಸ್ತಿಯನ್ನು ಪಡೆದಿರುವ ಕನ್ನಡದ ಹಿರಿಯ ಸಾಹಿತಿ ಹಾಗೂ ಸಂಶೋದಕರು ಯಾರು? ಇವರ ಪತ್ನಿ ಕೂಡ ಕನ್ನಡದ ಖ್ಯಾತ ಲೇಖಕಿ, ಯಾರಿವರು?

ಸರಿ ಉತ್ತರಕ್ಕೆ ಪುಟ ೧೪ ನೋಡಿ

ಒಗಟು - ಉತ್ತರ

೧. ಮಡಕೆ ೨. ತುಟಿ

ಹಾಸ್ಯ ಚಿಲುಮೆ

ತಿಮ್ಮನ ಹೆಂಡತಿ: ನಿನ್ನಗಂಡ ದಿನಾ ಕುಡ್ಕೊಂಡು ಬರ್ತಾನಲ್ಲಾ ನೀನು ಕೇಳಲ್ವಾ?

ಗುಂಡನ ಹೆಂಡತಿ: ಕೇಳ್ದೆ.....ಕೊಡಲ್ಲಾ ಅಂದ್ರು

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ - ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ಪಾತರಗಿತ್ತಿಯರ ನಲಿದಾಟ - ೨೧-೧೧ - ರಚನೆ- ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ ಉಪನಗರ

ಎಂ. ಕೆ. ಇಂದಿರಾ

ಲೇಖಕರು:
ನಾಗಶೈಲ ಕುಮಾರ್

ನಾ ಮೆಚ್ಚಿದ ಲೇಖಕರು.- ಎಂ.ಕೆ.ಇಂದಿರಾವರು ಇದ್ದಿದ್ದರೆ ಈ ವರ್ಷ ಅವರಿಗೆ ನೂರಾಗುತ್ತಿತ್ತು. ನಾನು ಬಹಳವಾಗಿ ಮೆಚ್ಚಿ, ಸ್ಪೂರ್ತಿ ಪಡೆದ ಹಲವು ಲೇಖಕರಲ್ಲಿ ಇಂದಿರಾರವರು ಮೊದಲನೆಯವರು ಎಂದೇ ಹೇಳಬಹುದು. ಹಾಗಾಗಿ ಅವರ ಸ್ಮರಣೆಯಲ್ಲಿ ಈ ಕಿರು ಲೇಖನ.

ಅವರು ಬರೆದ ಪುಸ್ತಕ ಪದವಿಯ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ. ಅವರ ಪುಸ್ತಕವನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಗಳಿಸಿದ್ದಾರೆ. ಇವರು ಬರೆದ ಪುಸ್ತಕಗಳ ಬಗ್ಗೆ ಪ್ರಬಂಧ ಮಂಡಿಸಿ ಪಿಹೆಚ್ ಡಿ ಗಳಿಸಿದ್ದಾರೆ. ಹಾಗಾದರೆ ಇವರು ಇನ್ನೆಷ್ಟು ಓದಿರಬಹುದು.....

"ನಾಗಶೈಲ ಸದಾನಂದನ ಜೊತೆ ಮಾತ್ನಾಡಿದ್ದೀನಿ, ಈ ಶನಿವಾರ ಮಧ್ಯಾಹ್ನ ಅವರ ಮನೆಗೆ ಬಂದು ಅಜ್ಜೀನ ಮಾತ್ನಾಡಿಸ್ಕೊಂಡು ಹೋಗಿ ಅಂತ ಹೇಳಿದ್ದಾನೆ", ಅಂತ ನಾರಾಯಣ ಬಂದು ಹೇಳಿದಾಗ ನನಗೆ ಎಲ್ಲಿಲ್ಲದ ಖುಷಿ.

"ಹೌದಾ, ಒಪ್ಕೊಂಡ್ ಬಿಟ್ರಾ, ನಾವ್ ಅವ್ರ ಮನೆಗೆ ಹೋಗ್ಬಹುದಂತಾ?", ನಾನು ನಂಬಲಾರದೆ ಕೇಳಿದೆ.

" ಏ.....ಇನ್ನೇನ್ ನಾನು ಹೇಳ್ತಾ ಇರೋದು, ಒಪ್ಕೊಂಡ್ರು ಅಂತಾ ತಾನೆ? ಆದ್ರೆ ಒಂದು ಕಂಡಿಷನ್ನು, ಅವರಜ್ಜಿಗೆ ಆರೋಗ್ಯ ಅಷ್ಟು ಸರಿ ಇರಲ್ಲ, ಜಾಸ್ತಿ ಮಾತಾಡಿದ್ರೆ ಆಯಾಸ ಆಗುತ್ತೆ, ಅದಕ್ಕೆ ಬರೀ ಅರ್ಧ ಗಂಟೆ ಮಾತ್ರ ಅವರನ್ನ ಮಾತಾಡ್ಸಿಕೊಂಡು ಹೋಗಿ ಅಂತ ಸದಾನಂದ ಹೇಳಿದ್ದಾನೆ".

"ಅವರ ಜೊತೆಗೆ ಅರ್ಧ ಗಂಟೆ ಮಾತಾಡಕ್ಕೆ ಅವಕಾಶ ಸಿಕ್ಕಿದೆಯೆಲ್ಲಾ ಅಷ್ಟೇ ಸಾಕು, ನೀನೂ ಬರ್ತೀಯ ತಾನೆ", ಎಂದೆ.

" ಏನು ನನ್ನ ಬಿಟ್ಟು ನೀವೊಬ್ರೇ ಹೋಗೊ ಪ್ಲಾನಾ ನಿಮ್ದೂ, ನೀವಿದ್ದೀರಾ ನೋಡಿ ಬಾಳಾ ಛತ್ರಿ. ಸರಿ ಶನಿವಾರ ಮಧ್ಯಾಹ್ನ ಎರಡು ಗಂಟೆಗೆ ರೆಡಿ ಆಗಿರಿ ಹೋಗ್ಬರೋಣ", ಎನ್ನುತ್ತಾ ನಾರಾಯಣ ಸೈಕಲ್ ಹತ್ತಿ ಹೊರಟ.

×××××××

ಶನಿವಾರ ಮಧ್ಯಾಹ್ನ ಎರಡೂವರೆಯ ಹೊತ್ತಿಗೆ ಸದಾನಂದನ ಮನೆಯ ಮುಂದಿದ್ದೆವು. ಸದಾನಂದ ನಾರಾಯಣನ ಸ್ನೇಹಿತ, ಅವರ ಮನೆಯ ಹೆಸರು 'ಮಧುವನ'. ಮನೆಯ ಹೆಸರನ್ನು ನೋಡಿದ ಕೂಡಲೇ ಹೆಸರುಗಳ ಹಿಂದಿನ ಹಿನ್ನೆಲೆ ಅರಿವಾಗಿ ಮುಖದಲ್ಲಿ ನಗು ಮೂಡಿತು.

"ಯಾಕೆ ಒಬ್ರೆ ನಗ್ತಾ ಇದ್ದೀರಾ, ನನಗೂ ಹೇಳಬಾರ್ದ ಸ್ವಲ್ಪ", ನಾರಾಯಣ ಹುಸಿಮುನಿಸಿನಿಂದ ಕೇಳಿದ.

ನಾವಿಬ್ಬರೂ ಹಾಗೇ ಸ್ವಲ್ಪ , ಒಬ್ಬರಿಗೆ ಕಂಡದ್ದನ್ನು ಇನ್ನೊಬ್ಬರಿಗೆ ಹೇಳಿಬಿಡಬೇಕು.

"ಸ್ವಲ್ಪ ಹೊತ್ತು ಇರು, ನಿನಗೇ ಗೊತ್ತಾಗುತ್ತೆ", ಎನ್ನುತ್ತಾ ಅವನನ್ನು ಮನೆಯೊಳಗೆ ಹಿಂಬಾಲಿಸಿದೆ.

ಸದಾನಂದ, ಅವರ ಅಮ್ಮನಿಗೆ ನನ್ನ ಪರಿಚಯ ಮಾಡಿಸಿದ, ನಾರಾಯಣ ಅವರ ಮನೆಗೆ ಹಳಬ. ಇಬ್ಬರೂ ಬಲು ಆತ್ಮೀಯತೆಯಿಂದ ಮಾತನಾಡಿಸಿದರು. "ಅಜ್ಜಿಗೆ ಆರೋಗ್ಯ ಅಷ್ಟೊಂದು ಸರಿ ಇರಲ್ಲ, ಅವರಿಗೇನೋ ಮಾತ್ನಾಡಕ್ಕೆ ತುಂಬಾ ಇಷ್ಟ, ಆದ್ರೆ ತುಂಬಾ ಸುಸ್ತಾಗಿ ಬಿಡ್ತಾರೆ, ಒಂದು ಅರ್ಧ ಗಂಟೆ ಮಾತ್ನಾಡ್ಸಿ ಸಾಕು. ಹೀಗೆ ಹೇಳ್ತಿನಿ ಅಂತ ಬೇಜಾರು ಮಾಡ್ಕೋಬೇಡಿ", ಅಂತ ನುಡಿದು ಒಳಗೆ ನಡೆದರು.

"ಅಜ್ಜೀನ್ ಕರ್ಕೊಂಡ್ಬತ್ತೀನಿ", ಅಂತ ಸದಾನಂದ ರೂಮಿನೊಳಗೆ ನಡೆದ. ನಾನು ಆನಂದ, ಉದ್ವೇಗಗಳಿಂದ ಕಾದೆ. ನಿಧಾನವಾಗಿ ಕೋಣೆಯೊಳಗಿನಿಂದ ಹೊರ ಬಂದರು ಅಜ್ಜಿ.

ಕನ್ನಡದ ಅತ್ಯಂತ ಜನಪ್ರಿಯ ಲೇಖಕಿ, ಗೆಜ್ಜೆಪೂಜೆ, ಪಣಿಯಮ್ಮ, ಸದಾನಂದ ಮುಂತಾದ ಶ್ರೇಷ್ಠ ಕಾದಂಬರಿಗಳ ರಚೆಸಿ. ಅನೇಕ ಪ್ರಶಸ್ತಿಗಳ ಗಳಿಸಿರುವ ಹಿರಿಯ ಚೇತನ ಎಂ ಕೆ ಇಂದಿರಾ. ಪತ್ರಿಕೆಗಳಲ್ಲಿ, ಪುಸ್ತಕಗಳ ಮೇಲೆ ನೋಡಿ ನೋಡಿ ಚಿರಪರಿಚಿತವಾಗಿರುವ ಮುಖ, ಎದುರಿಗೆ ಬಂದಾಗ ಮೂಕನಾಗಿದ್ದೆ.

"ಕೂತ್ಕೊಳ್ಳಪ್ಪ," ಎನ್ನುತ್ತಾ ತಾವೂ ಕುಳಿತರು.

ಕೆಲಕಾಲ ಏನೂ ಮಾತನಾಡಲು ತೋಚದೆ ಸುಮ್ಮನೆ ಕುಳಿತಿದ್ದೆ. "ಮಾತ್ನಾಡ್ಬೇಕು ಅಂತ ಬಂದ್ಬಿಟ್ಟು ಹೀಗೆ ಸುಮ್ನೆ ಕೂತ್ಬಿಟ್ರೆ ಹೇಗೆ, ಮಾತ್ನಾಡ್ರಿ ರೀ" ಎಂದು ರೇಗಿಸಿದ ನಾರಾಯಣ.

ಮುಂದಿನ ಪುಟ ನೋಡಿ ...

"ನಿಮ್ಮ ಪುಸ್ತಕಗಳ ಅಭಿಮಾನಿ ನಾನು, ನಿಮ್ಮ ಸುಮಾರು ಪುಸ್ತಕಗಳನ್ನೆಲ್ಲಾ ಓದಿದ್ದೀನಿ ನಾನು, ಅದರಲ್ಲೂ 'ತಗ್ಗಿನ ಮನೆ ಸೀತೆ' ಅಂತೂ ನನಗೆ ತುಂಬಾ ಇಷ್ಟವಾದ ಕಥೆ. ಹಾಗೇ ಗೆಜ್ಜೆಪೂಜೆ, ತುಂಗಭದ್ರ, ಸದಾನಂದ, ನೀವು ಬರೆದಿರೋ ಎಲ್ಲ ಪುಸ್ತಕಗಳೂ ಒಂದಕ್ಕಿಂತ ಒಂದು ಚೆನ್ನಾಗಿರುತ್ತೆ," ಒಂದೇ ಉಸಿರಿನಲ್ಲಿ ಹೇಳಿ ನಿಲ್ಲಿಸಿದೆ.

"ಈಗಿನ ಕಾಲದಲ್ಲೂ ನಿಮ್ಮಂತ ಹುಡುಗ್ರು ಕನ್ನಡದ ಕಥೆ ಪುಸ್ತಕಗಳನ್ನ ಓದುತ್ತೀರಾ ಅಂದ್ರೆ ತುಂಬಾನೆ ಸಂತೋಷ ಆಗುತ್ತಪ್ಪ." ಎಂದರು ಅಭಿಮಾನದಿಂದ.

‘‘ ಓದೋದು ಅಂದ್ರೆ ನಂಗೆ ಹುಚ್ಚು. ಎಲ್ಲಿ, ಯಾವ ಕನ್ನಡ ಪುಸ್ತಕ ಸಿಕ್ಕಿದ್ರೂ ಸರಿ ಓದ್ತಾ ಇರ್ತೀನಿ. ಅದರಲ್ಲೂ ನಿಮ್ಮ ಪುಸ್ತಕಗಳನ್ನ ಓದ್ತಾ ಇದ್ರೆ, ನಾವೇ ಮಲೆನಾಡಿನಲ್ಲಿ ಓಡಾಡ್ತಿದ್ದ ಹಾಗಿರುತ್ತೆ. ಆ ಭಾಷೆ, ಅಲ್ಲಿಯ ಜೀವನ ಶೈಲಿ ಎಲ್ಲಾನೂ ತುಂಬಾನೇ ಸೊಗಸಾಗಿರುತ್ತೆ."

ಅಷ್ಟರಲ್ಲಿ ಸದಾನಂದನನ್ನು ಅವರ ತಾಯಿ ಒಳಗೆ ಕರೆದರು. ನಾನು, ಏನಪ್ಪಾ ಇದು ಇನ್ನೂ ಅರ್ಧ ಗಂಟೆ ಆಗೇ ಇಲ್ಲ, ಅಷ್ಟು ಬೇಗ ಮಾತು ಮುಗಿಸಕ್ಕೆ ಸೂಚನೆ ಬರ್ತಿದ್ದ ಹಾಗಿದೆ ಅಂದ್ಕೊಂಡೆ.

ಅಡುಗೆಮನೆಯ ಬಾಗಿಲ ಕಡೆ ನೋಡುತ್ತಿದ್ದಂತೆ ಸದಾನಂದನ ಅಮ್ಮನೇ ಹೊರಬಂದರು. ಅವರ ಎರಡೂ ಕೈಗಳಲ್ಲಿ ಬಿಸಿಬಿಸಿಯಾಗಿ ಹಬೆಯಾಡುವ ಉಪ್ಪಿಟ್ಟು, ಸದಾನಂದನ ಕೈಯಲ್ಲಿ ನೀರಿನ ಲೋಟಗಳು.

"ತೊಗೊಳ್ಳಿ, ತಿಂಡಿ ತಿಂದ್ಕೊಂಡು ನಿಧಾನಕ್ಕೆ ಮಾತ್ನಾಡ್ಕೊಂಡು ಕೂತ್ಕೊಳ್ಳಿ, ಅವರ್ದು ಈಗ್ತಾನೆ ಊಟ ಆಗಿದೆ, ನೀವು ತೊಗೊಳ್ಳಿ," ಎನ್ನುತ್ತಾ ತಟ್ಟೆಗಳನ್ನು ಕೈಗಿತ್ತರು. ಅವರ ಆತ್ಮೀಯತೆಗೆ ಮಾರುಹೋದೆ.

"ನಿಮಗೆ ಬರೆಯಲು ಪ್ರೇರಣೆ ಯಾರು? ಎಷ್ಟು ವರ್ಷಗಳಿಂದ ಬರೆಯುತ್ತಿದ್ದೀರಾ? ನೀವು ಬರೆಯುವ ಕಥೆಗಳೆಲ್ಲವೂ ನಿಜವಾಗಿ ನಡೆದ ಘಟನೆಗಳೇ?", ನನ್ನ ಮನಸ್ಸಿನಲ್ಲಿ ಕೊರೆಯುತ್ತಿದ್ದ ಕೆಲವು ಪ್ರಶ್ನೆಗಳನ್ನು ಕೇಳುತ್ತಾ ಇಂದಿರಾರವರನ್ನು ಮಾತಿಗೆಳೆದೆ.

××××××××××

ಎಂ ಕೆ ಇಂದಿರಾ ಜನಿಸಿದ್ದು ಮಲೆನಾಡಿನ ನಡುವಿನ ತೀರ್ಥಹಳ್ಳಿಯಲ್ಲಿ. ಬಂಧುಗಳಲ್ಲಿ ಕವಿಗಳು, ಲೇಖಕರು ಹಲವಾರು ಜನರಿದ್ದರು ಅವುಗಳ ಪ್ರಭಾವ ಇಂದಿರಾವರ ಮೇಲಾಗಿತ್ತಾದರೂ, ಅವರು ಓದಿದ್ದು ಕೇವಲ ಎರಡನೆಯ ತರಗತಿಯವರೆಗೆ ಮಾತ್ರ.

ಚಿಕ್ಕವಯಸ್ಸಿನಲ್ಲೇ ವಿವಾಹ, ಸಂಸಾರ, ಮಕ್ಕಳು, ಈ ಗಡಿಬಿಡಿಗಳಲ್ಲಿ ಮುಳುಗಿಹೋಗಿದ್ದವರು, ಒಮ್ಮೆ ಪರಿಚಯದವರೊಡನೆ ಮಾತುಕಥೆಯಾಡುತ್ತ, ತಮ್ಮ ಸುತ್ತಮುತ್ತಲಿನ ಜೀವನ, ಪರಿಸರವನ್ನೇ ಯಾಕೆ ಕಥೆಯಾಗಿ ಬರೆಯಬಾರದು ಎಂಬ ಮಾತುಬಂದಿತ್ತು. ಸರಿ ತಾವು ಬೆಳೆದ ಪರಿಸರ, ಸುತ್ತಮುತ್ತಲಿನ ವಾತಾವರಣ, ಕಂಡುಕೇಳಿದ ಬದುಕಿನ ಘಟನೆಗಳು ಎಲ್ಲವೂ ಕಥೆಗೆ ವಸ್ತುವಾಯಿತು.



ಆದರೆ ಮುದ್ರಣಕ್ಕೆ ಸಿದ್ಧವಾಗಿದ್ದ ಏಕೈಕ ಹಸ್ತಪ್ರತಿಯೇ ಕಳೆದು ಹೋಯಿತು. ಮತ್ತೆ ಕೇವಲ ಎರಡೇ ವಾರಗಳಲ್ಲಿ ಅದನ್ನು ಯಥಾವತ್ತಾಗಿ ಬರೆದರು. ಅದು ಪ್ರಕಟಣೆಗೊಂಡು ಯಶಸ್ವಿಯೂ ಆಯಿತು.ಅದೇ ಅವರ ಮೊದಲ ಕಾದಂಬರಿ 'ತುಂಗಭದ್ರ'. ಆಗ ಅವರಿಗೆ ವಯಸ್ಸು 43 ವರ್ಷಗಳು. ಬಹುಶಃ ಇಷ್ಟು ತಡವಾಗಿ ಬರೆಯಲಾರಂಭಿಸಿದ ಕನ್ನಡದ ಯಶಸ್ವೀ ಲೇಖಕರು ಯಾರೂ ಇಲ್ಲ.

ಆದರೆ ಆ ನಂತರ ಹಿಂದಿರುಗಿ ನೋಡದೆ ಸತತವಾಗಿ ನಲವತ್ತಕ್ಕೂ ಹೆಚ್ಚು ಕಾದಂಬರಿಗಳು, ಸಣ್ಣ ಕಥೆಗಳು, ಕಥಾ ಸಂಕಲನ, ಪ್ರವಾಸಿ ಕಥನ, ಚಿತ್ರರಂಗದ ಬಗ್ಗೆ ಒಂದು ದೊಡ್ಡ ಹೊತ್ತಿಗೆಯಂತಹ ಪುಸ್ತಕ, ದಿ. ಪುಟ್ಟಣ್ಣ ಕಣಗಾಲರ ಬಗ್ಗೆ ಒಂದು ಕಿರು ಪುಸ್ತಕ, ಹೀಗೆ ಬರಹದ ಅನೇಕ ಪ್ರಾಕಾರಗಳಲ್ಲಿ ತೊಡಗಿಸಿಕೊಂಡರು.

ಅವರ ಕಾದಂಬರಿಗಳಲ್ಲಿ ಹೆಣ್ಣಿನದೇ ಪ್ರಾಧಾನ್ಯತೆ. ಬಾಲ್ಯ ವಿವಾಹ, ವಿಧವಾ ವಿವಾಹ, ವೇಶ್ಯಾ ಪದ್ಧತಿ, ಸಮಾಜದಲ್ಲಿ ಹೆಣ್ಣಿನ ಸ್ಥಾನ, ಮಾನಸಿಕ ಸ್ವಾಸ್ಥ್ಯ, ಈ ರೀತಿಯ ಸಮಸ್ಯೆಗ ಆಯ್ದು ಕೊಂಡು ,ಅವುಗಳ ಪರಿಹಾರಕ್ಕೂ ಪ್ರಯತ್ನಿಸುತ್ತಿದ್ದರು. ತ್ತಿವೇಣಿಯವರಷ್ಟು ಗಂಭೀರವಾಗಿಯಲ್ಲದಿದ್ದರೂ, ಆದಷ್ಟೂ ಸರಳ ದೃಷ್ಟಿ ಕೋನದಿಂದಲೇ ಸಮಾಜದ ಸಮಸ್ಯೆಗಳನ್ನು ಓದುಗರ ಮುಂದಿಡುತ್ತಿದ್ದರು. ಹಲವಾರು ಕಥೆಗಳು ಅವರು ಕಂಡದ್ದೋ, ಅಥವಾ ನಡೆದ ಘಟನೆಗಳೊ ಆಗಿರುತ್ತಿತ್ತು.

ಮುಂದಿನ ಪುಟ ನೋಡಿ ...



ಫಣಿಯಮ್ಮ ಅವರು ಬಾಲ್ಯದಲ್ಲಿ, ಕುಟುಂಬದಲ್ಲೇ ಕಂಡ ನೈಜ ಚಿತ್ರಣವಾದರೆ, ಗೆಜ್ಜೆಪೂಜೆಗೆ ಮೈಸೂರಿನಲ್ಲಿ ನಡೆದ ಪ್ರೇಮಿಗಳ ಆತ್ಮಹತ್ಯೆ ಪ್ರೇರಣೆಯಾಗಿತ್ತು. ಅವೆರಡೂ ಕಥೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದೊಂದು ಇತಿಹಾಸ.

ಗೆಜ್ಜೆಪೂಜೆ ಎಷ್ಟು ಜನಪ್ರಿಯವಾಗಿತ್ತೆಂದರೆ ನಿರ್ದೇಶಕ ಪುಟ್ಟಣ್ಣನವರು ಆ ಚಿತ್ರದ ಚಿತ್ರೀಕರಣಕ್ಕೆಂದು ಮನೆಯೊಂದನ್ನು ಹುಡುಕುತ್ತಾ, ಸೂಕ್ತವೆನಿಸಿದ ಮನೆಯೊಂದರ ಬಳಿ ಹೋದರು. ಅವರು ಸಮೀಪಿಸಿದಾಗ ಆ ಮನೆಯ ಹುಡುಗಿ ಓದುತ್ತಾ ಕೈಲಿ ಹಿಡಿದಿದ್ದ ಪುಸ್ತಕ ಗೆಜ್ಜೆಪೂಜೆ.

ಪುಟ್ಟಣ್ಣನವರು ಇಂದಿರಾವರಿಗೆ ಆತ್ಮೀಯ ಸೋದರನಂತಿದ್ದರು. ಅವರ ಬಗ್ಗೆ ಇಂದಿರಾವರು 'ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ್' ಕೃತಿ ರಚಿಸಿ ಸ್ನೇಹ, ಆತ್ಮೀಯತೆಗಳಿಂದ ಅವರ ಜೀವನದ ಚಿತ್ರಣವನ್ನು ನೀಡಿದ್ದಾರೆ.

ಗೆಜ್ಜೆಪೂಜೆಯಲ್ಲದೆ, ಸದಾನಂದ, ಫಣಿಯಮ್ಮ, ಮುಸುಕು, ಗಿರಿಬಾಲೆ, ಹೂಬಾಣ(ಮುತ್ತು ಒಂದು ಮುತ್ತು), ಪೂರ್ವಾಪರ ಕಾದಂಬರಿಗಳು ಚಲನ ಚಿತ್ರಗಳಾಗಿವೆ. ಫಣಿಯಮ್ಮ, ತುಂಗಭದ್ರೆ ಹಾಗೂ ಇನ್ನೂ ಹಲವಾರು ಕಾದಂಬರಿಗಳು ಇಂಗ್ಲೀಷ್, ತೆಲುಗು, ಮೊದಲಾದ ಭಾಷೆಗಳಿಗೆ ಅನುವಾದಗೊಡಿವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳ ಇವರಿಗೆ ಸಂದಿವೆ. ಎಲ್ಲಕ್ಕಿಂತ ಹಿರಿಮೆಯ ಸಂಗತಿಯೆಂದರೆ, ಎರಡನೆಯ ತರಗತಿಯಷ್ಟೇ ಓದಿರುವ ಇವರು ಬರೆದಿರುವ 'ತುಂಗಭದ್ರ' ಪುಸ್ತಕವು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ಪಠ್ಯಪುಸ್ತಕವಾಗಿ ಆಯ್ಕೆಯಾದದ್ದು ಮತ್ತು, ಮತ್ತೊಮ್ಮೆ, ಎರಡನೆಯ ತರಗತಿಯಷ್ಟೇ ಓದಿರುವ ಇವರ ಪುಸ್ತಕಗಳ ಬಗ್ಗೆ ಅಧ್ಯಯನ ನಡೆಸಿ ವಿದ್ಯಾರ್ಥಿನಿಯೋರ್ವರು ಪಿಹೆಚ್ ಡಿ ಪ್ರಭಂದ ಮಂಡಿಸಿರುವುದು.

ಇಂದಿರಾವರ ಕಾದಂಬರಿಗಳು ಇಷ್ಟವಾಗುವುದು ಅದರಲ್ಲಿನ ಮಲೆನಾಡಿನ ಮಣ್ಣಿನ ಕಂಪಿಗೆ, ಭಾಷೆಯ ಸೊಗಡಿಗೆ, ಸರಳ ವಿಚಾರಧಾರೆಗೆ. ತಮ್ಮ ಬರಹದಿಂದಲೇ ಅವರು ನಮ್ಮನ್ನು , ನಾವೇ ಹೋಗಿ ನೋಡುವುದಕ್ಕಿಂತಲೂ ಹೆಚ್ಚಾಗಿ ಅಲ್ಲಿಯ ಬದುಕಿನ ಒಳಕ್ಕೆ ಕರೆದುಕೊಂಡು ಹೋಗಿಬಿಡುತ್ತಾರೆ. ಪುಸ್ತಕವನ್ನು ಮುಚ್ಚಿಟ್ಟಾದ ಮೇಲೆಯೇ ನಾವು ಹೊರಬರಲು ಸಾಧ್ಯವಾಗುವುದು. ಅಂತಹ ಆಕರ್ಷಣೆ ಆ ಬಾಷೆಗೆ, ಶೈಲಿಗೆ. ಅವರ ಮಾತುಕೂಡ ಹಾಗೇ ಇತ್ತು. ಅವರ ಮಾತಿನ ಲಹರಿಯಲ್ಲಿ ಮುಳುಗಿ ಹೋಗಿ, ಮುವ್ವತ್ತು ನಿಮಿಷಗಳು ಮೂರು ಗಂಟೆಗಳಾಗಿದ್ದು ತಿಳಿಯಲೇ ಇಲ್ಲ.

ಅವರೊಡನೆ ಮಾತುಕಥೆಯಾಡಿದ ನಂತರ, ಅವರೊಡನೆ ಕಳೆದ ಆ ಸಮಯ ನಮ್ಮ ಸುಯೋಗವೆನಿಸಿತ್ತು. ಶೃಂಗೇರಿಯ ವಾಗ್ದೇವಿ ಜೀವ ತಳೆದು ನಮ್ಮ ಮೇಲೆ ಕೃಪಾದೃಷ್ಟಿ ಬೀರಿದಂತಿತ್ತು. ಆ ಹಿರಿಯ ಜೀವಕ್ಕೆ ವಂದಿಸಿ, ಸಾರ್ಥಕತೆಯ ಭಾವದೊಡನೆ ಅಲ್ಲಿಂದ ಹೊರಬಂದಿದ್ದೆವು. ವಿಶ್ವಾಸಪೂರ್ವಕವಾಗಿ ಅವರು ಕೊಟ್ಟ 'ಚಿತ್ರಶಿಲ್ಪಿ ಪುಟ್ಟಣ್ಣಕಣಗಾಲ್' ಪುಸ್ತಕ ನನ್ನ ಕೈಲಿತ್ತು. ▪

ಜಾಣ ಕರ್ನಾಟಕ – ಉತ್ತರ

೧. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬೆಂಗಳೂರು ಮಹಾ ನಗರ ಸಾರಿಗೆ. ಯು.ಚಿದಾನಂದ ಮೂರ್ತಿ.

೨. ಹಂ. ಪ. ನಾಗರಾಜಯ್ಯ. ಕಮಲಾ ಹಂಪನಾ

ನೀವು ಮಾಡಿ

ಕ್ರೆಡಿಟ್ ಕಾರ್ಡ್

ಸಂಗ್ರಹ: ಬದರಿ ತ್ಯಾಮಗೊಂಡ್ಲು



ಕ್ರೆಡಿಟ್ ಕಾರ್ಡನ್ನು ಶಾಪಿಂಗ್ ಮಾಡಿ ಉಜ್ಜಿದಾಗ ಏನಾಗುತ್ತದೆ ಎನ್ನುವುದರ ಒಂದು ಪುಟ್ಟ ಪರಿಚಯ ಈ ಪ್ರಯೋಗದ ಉದ್ದೇಶ. ಇದನ್ನು ಸುಲಭವಾಗಿ ಮನೆಯಲ್ಲಿ ಮಾಡಬಹುದು.

ಬೇಕಾಗುವ ಸಾಮಗ್ರಿ:

- ಒಂದು ಹಳೆಯ ಉಪಯೋಗಿಸದ ಕ್ರೆಡಿಟ್ ಕಾರ್ಡ್ (ಅಥವಾ ಮ್ಯಾಗ್ನೆಟಿಕ್ ಸ್ಟ್ರಿಪ್ ಇರುವ ಕಾರ್ಡ್)
- ತುಕ್ಕು ಹಿಡಿದಂತಹ ಯಾವುದೇ ಒಂದು ವಸ್ತು (ತುಕ್ಕು ಹಿಡಿದ ಬೋಲ್ಟ್ ನಟ್ ಇತ್ಯಾದಿ)
- ಉಪ್ಪು ಕಾಗದ (ಸ್ಯಾಂಡ್ ಪೇಪರ್)

ವಿಧಾನ:

- ಕಾಲು ಚಮಚ ಆಗುವಷ್ಟು ತುಕ್ಕಿನ ಪುಡಿಯನ್ನು ತುಕ್ಕು ಹಿಡಿದ ವಸ್ತುವಿನಿಂದ ಸ್ಯಾಂಡ್ ಪೇಪರ್ ಉಪಯೋಗಿಸಿ ಇಟ್ಟುಕೊಳ್ಳಿ
- ಆ ಪುಡಿಯನ್ನು ಕಾರ್ಡಿನ ಮ್ಯಾಗ್ನೆಟಿಕ್ ಪಟ್ಟಿಯ ಮೇಲೆ ಉದುರಿಸಿ.
- ನಿಧಾನವಾಗಿ ಕಾರ್ಡ್ ಬಗ್ಗಿಸಿ ಪುಡಿ ಉದುರುವಂತೆ ಮಾಡಿ
- ಹೀಗೆ ಮಾಡಿದಾಗ ಉದ್ದುದ್ದದ ಗೆರೆಗಳು ಕಾಣುತ್ತವೆ. ಈ ಗೆರೆಗಳೇ ನಮ್ಮ ವಯ್ಯಕ್ತಿಕ ಮಾಹಿತಿಯನ್ನು ಸಂಕೇತ ರೂಪದಲ್ಲಿ ಹಿಡಿದಿಟ್ಟುಕೊಳ್ಳುವುದು

ಏನಾಗುತ್ತಿದೆ:

ಕ್ರೆಡಿಟ್ ಕಾರ್ಡಿನ ಆ ಪಟ್ಟಿಯಲ್ಲಿ ಆಯಸ್ಕಾಂತೀಯ ಗೆರೆಗಳಾಗಿ ನಿಮ್ಮ ವಯ್ಯಕ್ತಿಕ ಮಾಹಿತಿಯನ್ನು ಸಂಗ್ರಹಿಸಿರುತ್ತಾರೆ.
ನೀವು ತುಕ್ಕು ಹಿಡಿದ ಪುಡಿಯನ್ನು ಉದುರಿಸಿದಾಗ ಕಬ್ಬಿಣದ ಆ ಪುಡಿಯು ಆಯಸ್ಕಾಂತದಿಂದ ಆಕರ್ಷಿತವಾಗಿ ಅಂಟುಕೊಳ್ಳುತ್ತದೆ. ಹೀಗಾಗಿ ಆ ತರಹದ ಗೆರೆಗಳನ್ನು ನೋಡುತ್ತೀರಿ. ನೀವು ಕ್ರೆಡಿಟ್ ಕಾರ್ಡ್ ಅನ್ನು ಮಷೀನ್ ಮೂಲಕ ಉಜ್ಜಿದಾಗ, ಅದರಲ್ಲಿ ಉಂಟಾಗುವ ವಿದ್ಯುಚ್ಛಕ್ತಿ ಪ್ರವಾಹದ ಏರಿಳಿತದ ಮಾಹಿತಿಯನ್ನು ರೀಡರ್ ಗೆ ರವಾನಿಸಲ್ಪಡುತ್ತದೆ. ರೀಡರ್ ನಲ್ಲಿರುವ ತಂತ್ರಾಂಶದ ಸಹಾಯದಿಂದ ಕಾರ್ಡ್ ನಂಬರ್ ಇತ್ಯಾದಿ ಮಾಹಿತಿ ಓದಲಾಗುತ್ತದೆ ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ವಿವಿಡ್ ಸಿಡ್ನಿ

೨೬ ಮೇ – ೧೭ ಜೂನ್

ಹೆಚ್ಚಿನ ಮಾಹಿತಿಗೆ ಭೇಟಿ ಕೊಡಿ.
https://www.vividsydney.com/

ಸಿಡ್ನಿ ಫಿಲಂ ಫೆಸ್ಟಿವಲ್

ದಿನಾಂಕ: ಜೂನ್ 7 - 18, 2017

ಹೆಚ್ಚಿನ ಮಾಹಿತಿಗೆ ಭೇಟಿ ಕೊಡಿ.
http://www.sff.org.au/

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ
ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ
ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ
ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.